2-10-80

ಕತ್ತಿ ಕೊಯ್ಯುವರಾರು?

...ಗ ಕಾರ್ಯಾಲಯ ಉಡುಪಿ.

0—6—0

ಕತ್ತು ಕೊಯ್ದುವರಾರು?

(ಪತ್ತೇದಾರಿ ಸಣ್ಣ ಕತೆಗಳೆರಡು)

ಕೆ. ಎಸ್. ರಾಮಕೃಷ್ಣಮೂರ್ತಿ
ಶಿವಮೊಗ್ಗ

ಅಂತರಂಗ ಕಾರ್ಯಾಲಯ, ಉಡುಪಿ.

0-6-0

ಸಂಪಾದಕ ಮತ್ತು ಪ್ರಕಾಶಕ—
ಕೆ. ಹೊನ್ನಯ್ಯ ಶೆಟ್ಟಿ,
ಅಂತರಂಗ ಕಾರ್ಯಾಲಯ,
ಉಡುಪಿ.

ವಿಕ್ರಯಾಧಿಕಾರಿಗಳು—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮುದ್ರಕರು—
ಕೆ. ಎಚ್. ಶೆಟ್ಟಿ
ನವಯುಗ ಪ್ರೆಸ್
ಉಡುಪಿ.

ಕತ್ತು ಕೊಯ್ಯುವರಾರು?

೧

"ನಾಗಣ್ಣೋರೆ, ಕಾಲು ಹೇಗಿದೆ?"

ಸ್ಟೂಲಿನ ಮೇಲಿಟ್ಟಿದ್ದ ದಪ್ಪ ಬ್ಯಾಂಡೇಜಿನ ಕಾಲನ್ನು ಮೇಲಕ್ಕೆ ಎತ್ತಿ ಮೆಲ್ಲಗೆ ಆಡಿಸುತ್ತಾ ಮುಗುಳ್ನಗೆ ಬೀರಿದ, ಸಾಹುಕಾರ ನಾಗಣ್ಣ.

"ಚೆನ್ನಾಗಿಯೂ ಉತ್ತಮ ಡಾಕ್ಟರ್; ನಿನ್ನೆ ನೀವು ಕೊಟ್ಟ ತೈಲದ ಶಕ್ತಿ ಅಂತಹದು. ಈ ವಾಯುಬಾಧೆಗೆ ಔಷಧಿಯೇ ಇಲ್ಲ; ಇದೆಲ್ಲ ಮನುಷ್ಯರು ಮಾಡುವ ಪಾಪಕ್ಕೆ ದೇವರು ವಿಧಿಸುವ ಶಿಕ್ಷೆ, ಅಜ್ಜನೋ ಮುತ್ತಜ್ಜನೋ ಮಾಡಿದ ಪಾಪದ ಫಲವನ್ನು ಮೊಮ್ಮಗನೊ ಮರಿಮಗನೋ ಅನುಭವಿಸಬೇಕಾಗಿ ಬರಬಹುದು—ಎಂದು ಹೇಳುತ್ತಿದ್ದಳು ನಮ್ಮಜ್ಜಿ; ನಮ್ಮಪ್ಪನಿಗೆ ಮಾತ್ರ ಉರುವಿನ ತುಪ್ಪದ ಮೇಲೆ ವಿಪರೀತ ಅಭಿಮಾನ; ಸಂಜೀವನಿ; ಸಿದ್ಧೌಷಧ ಎಂದೇ ಕರೆಯುತ್ತಿದ್ದರು ಅದನ್ನು. ನನ್ನ ಹತ್ತಿರದಲ್ಲೂ ಒಂದು ಸೀಸೆ ಇದೆ—ಐವತ್ತು ವರ್ಷದ ಹಿಂದೆ ತಯಾರಾದ್ದು, ಹಳತಾದಷ್ಟು ಅದರ ಶಕ್ತಿ ಹೆಚ್ಚುತ್ತಂತೆ! ನನ್ನ ಕಿವುಡನ್ನೂ ಕಳೆದಿದೆ ನೋಡಿ, ಮೊನ್ನೆ ಕಿವಿಗೆ ಒಂದೆರಡು ತೊಟ್ಟು ಹಾಕಿಕೊಂಡಿದ್ದೆ; ಈಗ ನೀವು ಮಹಡಿ ಹತ್ತಿ ಬಂದಿದ್ದು ಕೇಳಿಸಿತು. ಆದೇ ಮೊನ್ನೆ ಔಷಧಿ ಹಾಕಿಕೊಳ್ಳುವ ಮುಂಚೆ ಕೇಳಿಸ್ತಾನೇ ಇರಲಿಲ್ಲ.'"

ಡಾಕ್ಟರ್ ಶ್ರೀಧರ ಸುದೀರ್ಘ ಭಾಷಣವನ್ನು ಸಾವಧಾನದಿಂದ ಲಾಲಿಸಿದ. ನಾಗಣ್ಣನ ಆ ರೋಗದ ಕಾಲನ್ನು ಚಟ್ಟುತ್ತ "ಒಳ್ಳೇಯದೇ ಆಯಿತು. ನಾಗಣ್ಣ, ಇನ್ನು ನಿಮ್ಮ ಕಾಲನ್ನು ಭೂಮಿಯ ಮೇಲೆ ಸ್ಥಾಪಿಸಬೇಕಷ್ಟೆ, ಆ ಮೇಲೆ ನಿಮ್ಮನ್ನು ಹಿಡಿಯುವವರಾರು? ಜಗತ್ತಿನ ಸಕಲ ಭೋಗ, ಸೌಖ್ಯಗಳನ್ನು ಅನುಭವಿಸುವಿರಂತೆ. ಇರಲಿ ಮೊನ್ನೆ ತುಂಬಾ ದೊಡ್ಡ ಮನಸ್ಸು ಮಾಡಿ ಸಾಲಕೊಟ್ಟಿದ್ದಿರಲ್ಲ ಐನೂರು ರೂಪಾಯಿ,

ತೆಗೊಳ್ಳಿ ಅದನ್ನು; ಈ ಬೆಳಿಗ್ಗೆ ನಾನೂ ಸಾಹುಕಾರನಾದೆ" ಎಂದ ಹತ್ತು ರೂಪಾಯಿ ನೋಟುಗಳ ಕಟ್ಟೊಂದನ್ನು ಸಾಹುಕಾರನೆಡೆ ಒಗೆದ

ನಾಗಣ್ಣ ಕಟ್ಟನ್ನು ಕೈಗೆ ತೆಗೆದುಕೊಂಡು ಎಣಿಸಿ ದಿಂಬಿನ ಕೆಳ ಇಡುತ್ತ—

"ಲಕ್ಷ್ಮಿಯನ್ನೊಲಿಸಿದಿರಾ ಡಾಕ್ಟರೆ? ಅಂತೂ ನೀವು ಕಟ್ಟಿದ ಕುದುರೆ ಗೆತ್ತು ಅನ್ನಿ!"

"ಕಷ್ಟಕಾಲಕ್ಕೆ ಇರಲಿ ಅಂತ ಆಗಾಗ್ಗೆ ಗೆಲ್ಲೋ ಕುದುರೆ ಮೇಲೆ ಕಟ್ಟುತ್ತೇನೆ"

ಸಾಹುಕಾರ ತಲೆಯಾಡಿಸಿದ.

"ನೀವಾಡೋ ಜೂಜಿನ ವಿಷಯವಾಗಿ ನಾ ಕೇಳೋ ಕತೆಗಳೇ ಬೇರೆ ತರಹೆಯವಲ್ಲಾ! ಡಾಕ್ಟರೆ—, ಹುಡುಗ ಹನುಮಂತಪ್ಪ ಹೇಳು ತ್ತಿದ್ದ ತಮಾಷೆಯಾಗಿ"

ಈ ಮಾತು ಕಿವಿಗೆ ಬೀಳುವುದೇ ತಡ ಡಾಕ್ಟರರ ಹುಬ್ಬು ಗಂಟಿ ಕ್ಕಿತು; ಒಡನೆ ಮುಖಚರ್ಯೆ ಬದಲಾಗಿ ಮುಗುಳ್ನಗೆ ಸೂಸಿತು. 'ಅವ ನಿಗೆ ಹೊಟ್ಟೆಕಿಚ್ಚು ನಾಗಣ್ಣ—ಉಳಿದವರೂ ಅವನಂತೆ ದಡ್ಡರು ಅಂತ ಅವನ ಬಯಕೆ. ಆ ಮಾತು ಹೋಗಲಿ ಈಗ ಕೊಟ್ಟ ದುಡ್ಡು ಜೂಜಿನ ಸಂಪಾದನೆಯಲ್ಲ; ನನ್ನೊಬ್ಬ ಶ್ರೀಮಂತ ರೋಗಿ ಗಿರಾಕಿ ಕೊಟ್ಟ ಹಳೆ ಬಾಕಿ ಬಾಬ್ತು ಹಣ. ಈ ಬೆಳಿಗ್ಗೆ ಚೆಕ್ಕನ್ನು ಕ್ಯಾಷ್ ಮಾಡಿಸಿದೆ'.

"ಓ! ಇವತ್ತು ಬ್ಯಾಂಕು ದಿನವೇನು? ನನಗಂತೂ ಅದೂ ಕೂಡ ಮರೆತು ಹೋಗಿರುತ್ತೆ."

ಮರವೇ ಹಳ್ಳಿ ಸಣ್ಣ ಗ್ರಾಮವಾದರೂ ಹತ್ತಾರು ಗ್ರಾಮಗಳಿಗೆ ಮಧ್ಯವಲ್ಲಿದ್ದು, ಸಣ್ಣ ಪೇಟೆಗೂ ವ್ಯಾಪಾರಕ್ಕೂ ಆಶ್ರಯವಾಗಿತ್ತು. ಅಲ್ಲಿಯ ಜನ ನಗರಗಳಿಗೆ ಹೆಚ್ಚಾಗಿ ಹೋಗಿ ಬರುತ್ತಿದ್ದುದರಿಂದ ನಗರ ಜೀವನದ ಛಾಯೆ ಅವರ ಜೀವನದ ನಾನಾ ಭಾಗಗಳಿಗೂ ಹಬ್ಬಿತ್ತು. ವ್ಯಾಪಾರಿಗರ ಅನುಕೂಲಕ್ಕಾಗಿಯೂ ಒಳ್ಳೆಯ ಲಾಭವಿದ್ದುದರಿಂದಲೂ ನಗರದ ಒಂದು ಬ್ಯಾಂಕಿನವರು ಪ್ರತಿ ಗುರುವಾರ ಗುಮಾಸ್ತೆಯೊಬ್ಬ

ತನ್ನು ಈ ಗ್ರಾಮಕ್ಕೆ ಕಳುಹಿಸುತ್ತಿದ್ದರು. ಆತ ನಾಗಣ್ಣನ ಮನೆಯ ನೆಲದಂತಸ್ತಿನ ಮುಂಭಾಗದ ಕೋಣೆಯಲ್ಲಿ ಬೆಳಿಗ್ಗೆ ೧೦-೩೦ರಿಂದ ೧೨-೩೦ರ ವರೆಗೆ ತನ್ನ ಕಛೇರಿಯನ್ನು ಸ್ಥಾಪಿಸಿ ಬ್ಯಾಂಕಿಂಗ್ ಲೇವಾ ದೇವಿಯನ್ನು ನಡೆಸುತಿದ್ದ. ಲೇವಾದೇವಿಗರ ಸಂದಣಿ ಹೆಚ್ಚಾಗಿಯೇ ಸೇರುತ್ತಿತ್ತು. ಮೊದಲು ವ್ಯಾಪಾರಿಗರು ಹಣಕಟ್ಟಲು ಬರುತ್ತಿದ್ದರು. ನಂತರ ಇತರರು ಸಣ್ಣ ಪುಟ್ಟ ಚೆಕ್‌ಗಳನ್ನು ಕ್ಯಾಷ್ ಮಾಡಿಸಲು ಬರುತ್ತಿದ್ದರು.

"ಹೌದು ನಾಗಣ್ಣ, ಇವತ್ತು ಬ್ಯಾಂಕ್ ದಿನ. ಆ! ಅದೇನು ಶಬ್ದ?" ಡಾಕ್ಟರ್ ಶ್ರೀಧರ ನೆಟ್ಟಗೆ ಕುಳಿತು ಆಲೈಸಿದ; ಸಾಹುಕಾರ ನಾಗಣ್ಣನೂ ಕಿವಿನೆಟ್ಟಗೆ ಮಾಡಿದ.

"ಏನು?"

"ಕೆಳಗಿನ ಕೋಣೆಯಿಂದ ಏನೋ ಶಬ್ದ—ಕೇಳಿಸ್ತೆ, ನಿಮಗೂ?"

"ಓಹೋ! ಕೇಳಿಸ್ತು, ಕೇಳಿಸ್ತು" ಉರುವಿನ ತುಪ್ಪದ ಮರ್ಯಾದೆ ಕಳೆವ ಇಷ್ಟವಿರಲಿಲ್ಲ ನಾಗಣ್ಣನಿಗೆ.

"ಎಲ್ಲೋ ಹೋಗೋಕ್ಕೆ ಎಲ್ಲೋ ಹೋಗಿ ಬಾಗಿಲು ತೆಗೆದು ಹಾಕಿ ಮಾಡಿದ ಶಬ್ದವಿರಬೇಕು; ಸ್ಥಳ ಗೊತ್ತಿಲ್ಲದ ಬ್ಯಾಂಕ್ ಗಿರಾಕಿ ಯಿರಬೇಕು."

ಡಾಕ್ಟರು ನಿಟ್ಟುಸಿರು ಬಿಟ್ಟ "ನಿನ್ನ ಮಾತು ನಿಜವಿರಬಹುದು ಆದರೆ ನನಗೆ ಹಾಗೆ ಭಾಸವಾಗುತ್ತಿಲ್ಲ".

ಡಾಕ್ಟರು ಸಾಹುಕಾರನ ಕಾಲಿಗೆ ಸುತ್ತಿದ ಬ್ಯಾಂಡೇಜನ್ನೂ ಬಿಚ್ಚಿದ. ಮೆಲ್ಲಗೆ ತನಗೇನೋ ಅನ್ನುವಂತೆ ಉರಿಯುವ ಚರ್ಮದ ಮೇಲೆ ಬೆರಳಾಡಿಸಿದ. ಸಾಮಗ್ರಿಗಳ ಚೀಲಕ್ಕೆ ಕೈಹಾಕಿ ಸಣ್ಣ ಸೀಸೆ ಹೊರತೆಗೆಯುವ ಹೊತ್ತಿಗೆ ಗಟ್ಟಿಯಾಗಿ ಬೊಬ್ಬೆ ಹಾಕಿದ ಶಬ್ದ. ಅದರ ಹಿಂದೆ ಮಹಡಿ ಮೆಟ್ಟಲ ಮೇಲೆ ಧಡಧಡನೆ ಬರುತ್ತಿದ್ದ ಶಬ್ದ ಕೇಳಿಬಂತು.

"ಯಾರಲ್ಲಿ? ಬನ್ನಿ, ಅಯ್ಯೋ ಬನ್ನಿ" ಯಾರದೋ ಕೂಗು.

ಡಾಕ್ಟರು ಚೀಲದ ಬಾಯಿ ಮುಚ್ಚಿ ಕೈಗೆತ್ತಿಕೊಂಡು ಬಾಗಿಲು

ಹೊಡೆದ. ಮೆಟ್ಟಲ ಬಳಿಯೊಬ್ಬ ಯುವಕ; ಕೈಯಲ್ಲಿ ಮಾಸಿ ಟೋಪಿ; ಮುಖ ಬಿಳಚಿಕೊಂಡಿದೆ; ಧ್ವನಿ ನಡುಗುತ್ತಿದೆ; ಭೀತಿಯಿಂ ಮೈ ಕಂಪಿಸುತ್ತಿದೆ.

"ಶೆಣೈನರ್ಸಾ—ಬ್ಯಾಂಕ್ ಕ್ಲಾರ್ಕನ್ನು ಯಾರೋ ಕೊಂದ ಹಾಕಿದ್ದಾರೆ!"

ಪ್ರಶ್ನೆಗಳನ್ನು ಹಾಕುತ್ತ ಕಾಲ ಕಳೆಯದೆ, ಡಾಕ್ಟರು ಧಡಧಡ ಮಹಡಿಯಿಳಿದು, ವಾಸದ ಒಳಗಿನ ಮೂಲಕ ಹಾದು ಬ್ಯಾಂಕಿ ಕಛೇರಿಯಾಗುತ್ತಿದ್ದ ಕೋಣೆಯೊಳಕ್ಕೆ ಹೆಜ್ಜೆಯಿಟ್ಟ. ಕಣ್ಣಿಗೆ ಬಿದ್ದ ದೃಶ್ಯ ಡಾಕ್ಟರ ಎದೆಯನ್ನೂ ಝಲ್ಲೆನಿಸಿತು. ಕೋಣೆಯ ಮಧ್ಯ ದಲ್ಲೊಂದು ಮೇಜು; ಅದರ ಹಿಂದೆ ಇದ್ದ ಕುರ್ಚಿಯ ಮೇಲೆ ಬೆಳಕಿ ಅಭಿಮುಖವಾಗಿ ಒರಗಿದ್ದ ಯುವಕನೊಬ್ಬನ ಶರೀರ; ರುಂಡ ಹಿಂದಕ್ಕೆ ಜೋತು ಬಿದ್ದಿತ್ತು. ಕತ್ತು ಕಿವಿಯಿಂದ ಕಿವಿಯ ವರೆಗೆ ಕೊಯ್ದಿತ್ತು ಶರೀರ ಕುರ್ಚಿಯಿಂದ ಕೆಳಕ್ಕೆ ಉರುಳದಂತೆ ಮುಂಬದಿಯ ಮೇಜು ತಡೆದಿತ್ತು; ಆ ಬಡಪಾಯಿಯ ಕೋಟು ಷರಟು, ಮುಂದೆ ಇದ್ದ ಎಣಿಕೆ ಬೋರ್ಡು ಅದರಲ್ಲಿದ್ದ ಹಣ ಎಲ್ಲ ರಕ್ತದಿಂದ ತೊಯ್ದು ಹೋಗಿತ್ತು.

ವೈದ್ಯಕೀಯ ಪರೀಕ್ಷೆಗೆ ತಕ್ಷಣ ಪ್ರಯತ್ನಿಸಬೇಕಾದ ಅಗತ್ಯ ವೇನೂ ಇರಲಿಲ್ಲ; ಜೀವಪಕ್ಷಿ ಹಾರಿಹೋಗಿದೆಯೆಂದು ಸಾಮಾನ್ಯನಿಗೂ ನೋಡಿದ ತಕ್ಷಣವೇ ಗೊತ್ತಾಗುತ್ತಿತ್ತು.

ಪಕ್ಕದಲ್ಲಿ ನಡುಗುತ್ತ ನಿಂತಿದ್ದವನನ್ನುದ್ದೇಶಿಸಿ ಡಾಕ್ಟರು "ಯಾರು ನೀನು" ಎಂದು ಗದರಿಸಿ ಕೇಳಿದ.

"ನಾನು ರಂಗಪ್ಪ ಸಾರ್, ನನ್ನ ಕಾರಿನಲ್ಲೇ ಸಾರ್ ಇವರು ಬಂ ದದ್ದು" "ಕೂಡಲೆ ಪೋಲೀಸ್ ಕರಿ—ಸ್ಟೇಷನ್ ಗೊತ್ತೇನು? ಸರಿಸರಿ— ಬಾಗಿಲಿಂದಾಚೆಗೆ ತಲೆ ಹಾಕಿ ಬೊಬ್ಬೆ ಹಾಕು, ಯಾವನು ಮೊದಲು ಇತ್ತ ಬರ್ತಾನೋ ಅವನ್ನ ಇನ್ಸ್‌ಪೆಕ್ಟರ್ ನಾರಾಯಣರಾಯರ ಹತ್ತಿರ ಕಳಿಸು. ಅವರಿಲ್ಲದಿದ್ದರೆ ಇದ್ದವರು ಬರಲಿ—ಆ ತಕ್ಷಣ ಒಳಕ್ಕೆ ಬಾ. ಇಗ ದುಡ್ಡು ತುಂಬಾ ಇದೆ. ಸಾಕ್ಷಿ ಒಬ್ಬ ಇರೋದು ಒಳ್ಳೆಯದು."

ಸುಮಾರು ಅರ್ಧ ನಿಮಿಷದಷ್ಟು ಹೊತ್ತು ರಂಗಪ್ಪ ಆಚೆ ಹೋಗಿದ್ದ. ಅದುವರೆಗೆ ಡಾಕ್ಟರ್ ನಿಂತೆಡೆಯೆ ನಿಂತು ಹಣದೆಡೆಗೂ ಮೇಜಿನೆಡೆಗೂ ಅವುಗಳ ಕತೆಯನ್ನು ಓದುವಂತೆ ದೃಷ್ಟಿಸುತ್ತಿದ್ದ. ಡೈವರು ಒಳಕ್ಕೆ ಕಾಲಿಟ್ಟ ಕೂಡಲೇ ಮೌನವಾಗಿ ಜಮಖಾನದ ಮೇಲೆ ಬಿದ್ದಿದ್ದ ರಕ್ತ ಮೆತ್ತಿದ್ದ ಚಾಕುವಿನೆಡೆ ಕೈ ತೋರಿಸಿದ; ಅದು ಸಾಧಾರಣ ವಾದ ತರಕಾರಿ ಹೆಚ್ಚುವ ಚಾಕು; ಆಗಾಗ್ಗೆ ಮಸೆದು ಮಸೆದು ಅಲಗು ಅರ್ಧ ಸವೆದಿತ್ತಾದರೂ ಬಾಯಿ ಮಾತ್ರ ತುಂಬಾ ಹರಿತವಾಗಿ ಹೆದರಿಕೆ ಉಂಟುಮಾಡುವಂತಿತ್ತು. ಅದರ ಜೊತೆ ಚಾಕುಗಳೆರಡೂ ಪಕ್ಕದ ಗೋಡೆ ಬೀರುವಿನಲ್ಲಿ ಮಲಗಿದ್ದವು; ಇದನ್ನೂ ಪ್ರಾಯಶಃ ಅಲ್ಲಿಂದಲೇ ತೆಗಿದಿರಬೇಕು.

"ಶಸ್ತ್ರ, ಅಲ್ಲಿದೆ ನೋಡು" ಡಾಕ್ಟರ್ ನುಡಿದ. "ರಂಗಪ್ಪಾ ಪೋಲೀಸಿನವರು ಬರುವ ವರೆಗೂ ನಾನೂ ನೀನೂ ಇಲ್ಲೇ ಇರಬೇಕು".

ಅವರೇನೂ ಬಹಳ ಹೊತ್ತು ಕಾಯಬೇಕಾಗಲಿಲ್ಲ. ಮೂರು ನಿಮಿಷದಲ್ಲಿ ಪ್ರಶಾಂತ ಮುಖ ಭಾವದಿಂದ ಕೂಡಿದ ದೃಢಕಾಯನಾದ ಪೋಲೀಸು ಅಧಿಕಾರಿಯೊಬ್ಬರು ನಾಗಣ್ಣನ ಮನೆ ಮುಂದೆ ನೋಟ ಕ್ಕಾಗಿ ಕೂಡಿದ್ದ ಗುಂಪಿನ ಮಧ್ಯೆ ತಳ್ಳಿಕೊಂಡು ಬಂದರು. ಬಾಗಿಲ ಮೇಲೆ ಕೈಯಿಟ್ಟೆ "ಇನ್ನು ನೀವೆಲ್ಲ ಹೊರಡಿ, ವೆಂಕಟ" ಜೊತೆಯಲ್ಲಿ ಬಂದಿದ್ದ ಕಾನ್‌ಸ್ಟೇಬಲನನ್ನುದ್ದೇಶಿಸಿ, "ಬಾಗಿಲ ಬಳಿ ನಿಲ್ಲು" ಎಂದರು.

ಒಂದೈದೇ ನಿಮಿಷದಲ್ಲಿ ಗುಂಪು ಚದುರಿತು. ಇನ್ಸ್‌ಪೆಕ್ಟರ್ ನಾರಾಯಣರಾಯರು ಒಬ್ಬನೂ ಉಳಿಯದಂತೆ ಎಲ್ಲರೂ ಹೋಗುವ ವರೆಗೂ ಬಾಗಿಲ ಬಳಿಯೇ ನಿಂತಿದ್ದು ನಂತರ ಬ್ಯಾಂಕ್ ಕೋಣೆಯ ಬಾಗಿಲು ತೆಗೆದು, ಡಾಕ್ಟರಿಗೆ ಕೈಮುಗಿದು ಸತ್ತವನಿದ್ದ ಕುರ್ಚಿಯ ಹಿಂಬದಿಗೆ ಹೋಗಿ ಬಾಗಿ ನೋಡ ತೊಡಗಿದರು.

"ಗಿರಾಕಿಗಳು ನಿಲ್ಲುವ ಸುಮಾರಿನಲ್ಲಿ ನೀವು ನಿಂತಿದ್ದೀರಲ್ಲವೇ ಡಾಕ್ಟರ್?"

"ಈಗ ಅರ್ಧಗಂಟೆಯ ಕೆಳಗೆ ಎಲ್ಲಿ ನಿಂತಿದ್ದೆನೋ ಈಗಲೂ ಅಲ್ಲೇ ನಿಂತಿದ್ದೇನೆ" ಡಾಕ್ಟರು ಮರುನುಡಿದರು.

ಮೊದಲ ಬಾರಿಗೆ ಇನ್ಸ್‌ಪೆಕ್ಟರನ ದೃಷ್ಟಿ ಡಾಕ್ಟರ ಮುಖದೆಡೆ ಹೊರಳಿತು, ಆದರೆ ಅವರೇನೂ ನುಡಿಯಲಿಲ್ಲ.

"ಅಲ್ಲಿಂದ ನೀವು ನನ್ನ ಮೇಲೆ ಹಾರ ಬಲ್ಲಿರಾ? ಸಾಧ್ಯವಿಲ್ಲ. ನ ಹಿಂದೆ ಸರಿಯಬಹುದು'' ಮಾತು ಬದಲಾಯಿಸಿ-"ನೀವು ಬಂದ ಮೇ ಮತ್ತೆ ಯಾರು ಯಾರು ಬಂದಿರಬಹುದು ನೆನಪಿದೆಯೇ ಸರ್?"

ಗೋವಿಂದ ರಾಯರು, ಹನುಮಂತಪ್ಪ ಹಾದಿಯಲ್ಲಿ ನಿಂತಿದ್ದ ನಾ ಹಿಂತಿರುಗುವಾಗ. ಗೋವಿಂದರಾಯರು ಮೊದಲು ನುಗ್ಗಿದರ ನಾಗಣ್ಣನ್ನ ನೋಡೋಕೆ ನಾನು ಮಹಡಿ ಮೆಟ್ಟಲು ಹತ್ತಿದೆ. ಈ ಮನು ಕಿರಿಚಿದಾಗ ನಾನು ಮೇಲಿದ್ದೆ.

ನಾರಾಯಣರಾಯರು ರಂಗಪ್ಪ ನೆಡೆ ತಿರುಗಿದರು.

ಹೌದು ಎಂದು ಅವನು ಮುಂದುವರಿದು ತನ್ನ ಪ್ರವರ ಹೇ ಹೀಗೆಂದ.

ಹತ್ತೂವರೆಯಿಂದ ಹನ್ನೆರಡೂವರೆ ವರೇಗೆ ಅಲೆಯುವುದು ನ ಪದ್ಧತಿ. ಏಕೆಂದರೆ ಇಂತಹ ಅವಕಾಶ ಸಿಕ್ಕುವುದೇ ಅಪರೂಪ.

ಎಂದಿನಂತೆ ಗಾಳಿ ಸಂಚಾರ ಮುಗಿಸಿ ಪುಸ್ತಕಗಳನ್ನು ಹೊರತ ವುದಕ್ಕೆ ಶಿಣ್ಯೆಗೆ ನೆರವಾಗಲೆಂದು ಒಳಗೆ ಬಂದೆ – ಬಂದರೆ — ಈ ದೃಶ್ಯ ಅಯ್ಯೋ ನನ್ನನ್ನು ಬದುಕಿಸಿ ದೇವರೇ—

ಸಾಕು ಮಾಡು! ನಿನ್ನನ್ನು ಯಾರೂ ಅಂದಿಲ್ಲವಲ್ಲ. ನೀಬಂದಾ ಯಾರಾದರೂ ಇದ್ದರೇನು? ನಾರಾಯಣರಾಯರು ಬಿರುಸಾಗಿ ನು ದರು.

ಯಾರೂ ಇಲ್ಲ ಒಂದು ನರಪಿಳ್ಳೆಯೂ ಇರಲಿಲ್ಲ ಸಾರ್. ನ ಬರುವ ಹೊತ್ತಿಗೆ ಬ್ಯಾಂಕು ಮುಚ್ಚೋ ಹೊತ್ತು ಮೀರಿ ಹೋಗಿತ್ತು ರಸ್ತೆ ತುದಿಯಲ್ಲಿ ಕೆಲ ಕೂಲಿಗಳಿದ್ದರು ಅಷ್ಟೆ.

ನಾರಾಯಣರಾಯರು ಡಾಕ್ಟರ ಕಡೆತಿರುಗಿ ನುಡಿದರು ''ನೀ ಮೂವರು ಕಡೆಯ ಗಿರಾಕಿಗಳು. ಡಾಕ್ಟರ್ ಶ್ರೀಧರ ರೂ. ೫೦೦ ಗೋವಿಂದರಾಯರು ರೂ. ೨೦೦೦/-; ಹನುಮಂತಪ್ಪ ರೂ.೪೫/- ಅ

ಕೆಳಗೆ—ಅಡ್ಡಗೀಟು—ಪಾವತಿಯಾದ ಮೊಬಲಗುಗಳ ಒಟ್ಟು ಕೂಡಿದ ಮೊತ್ತ ರೂ. ೨೫೫೦/- ಹನುಮಂತಪ್ಪನ್ನ ಈಗಲೇ ನೋಡಬೇಕು ನಾನು.

०O०

ಮ್ಯಾಜಿಸ್ಟ್ರೇಟರ ಕೊಠಡಿಯಲ್ಲಿ ಪೋಲೀಸರು ವರದಿಗಾರರು, ಲಾಯರು, ಕುತೂಹಲಿ ಜನರು ಕಿಕ್ಕಿರಿದು ನೆರೆದಿದ್ದರು. ಸೆಕೆ ವಿಪರೀತ ವಾಗಿದ್ದುದರಿಂದ ಮ್ಯಾಜಿಸ್ಟ್ರೇಟರು "ತೆಗಿರೀ ಕಿಟಕೀನ" ಎಂದು ನುಡಿ ಯುತ್ತಲೇ, ಹನುಮಂತಪ್ಪನೆಡೆ ದೃಷ್ಟಿ ಬೀರಿ "ನಿನ್ನ ಲಾಯರು ಬಂದಿ ದಾರೇನು?" ಎಂದರು.

ಮಧ್ಯ ವಯುಸ್ಸಿನ ಇಳಿಮೀಸೆಯ ವ್ಯಕ್ತಿಯೊಬ್ಬರು ಬಂದಿಯ ಬಳಿ ಹಾಕಿದ್ದ ಕುರ್ಚಿಯಿಂದ ಎದ್ದು ನಿಂತು "ನಾನು ಹನುಮಂತಪ್ಪನನ್ನು ಪ್ರತಿನಿಧಿಸುವವನು" ಎಂದರು ಕೈಮುಗಿದು. "ನಿಮ್ಮ ಕಕ್ಷಿಯ ಕೇಸು ಪ್ರತಿಭಾಶಾಲಿಯ ಕೈಯಲ್ಲಿದೆ, ಪರವಾಗಿಲ್ಲ ಶಾಸ್ತ್ರಿಗಳೇ" ಎಂದು ನುಡಿದು ಒಡನೆ ಮುಂದರಿದು "ಸಾಕ್ಷಿಗಳೆಲ್ಲ ಆಚೆ ಹೊರಡಿ" ಎಂದರು.

ಡ್ರೈವರ್ ರಂಗಪ್ಪನದಾದ ಮೇಲೆ ಮತ್ತೊಬ್ಬ ಸಾಕ್ಷ್ಯವಿತ್ತ; ಅವನಿಂದ ಹೊಸ ಅಂಶವ್ಯಾವುದೂ ಹೊರಪಡಲಿಲ್ಲ. ನಂತರ ಡಾಕ್ಟರ್ ಶ್ರೀಧರ ಸಾಕ್ಷಿ ಕಟಾಂಜನ ಪ್ರವೇಶಿಸಿದ. ಮೊದಲು ರಂಗಪ್ಪ ಅರಚಿ ಕರೆದ ಅಂಶವನ್ನೂ ನಂತರ ಅನಾಹುತವಾಗಿದ್ದ ಸ್ಥಳಕ್ಕೆ ತಾನು ಹೋದ ದ್ದನ್ನೂ ವಿವರಿಸಿ, ಕೋಣೆಯ ಸ್ಥಿತಿ, ಶರೀರವಿದ್ದ ರೀತಿ ಸತ್ತವನಿಗಾಗಿದ್ದ ಗಾಯಗಳ ವಿವರಣೆಯಿತ್ತು "ಕೊಯ್ದುದ ಗಾಯದ ಉದ್ದ ೫", ಅಗಲ ೪" ಕಿವಿಯಿಂದ ಕಿವಿವರೆಗೆ ಸೀಳಲಾಗಿದೆ. ಗಾಯದಿಂದ ಕುತ್ತಿಗೆಯ ಪ್ರಧಾನ ರಕ್ತನಾಳಗಳೂ, ಸ್ನಾಯುಗಳೂ ತುಂಡಾಗಿವೆ. ಗೆರೆಯಿಟ್ಟಂತೆ ಕೊಯ್ಯಲಾಗಿದೆ. ಗಾಯದ ತಳದಲ್ಲಿ ರಕ್ತ ಗಡ್ಡೆಕಟ್ಟಿದೆ.

"ಯಾವುದರಿಂದ ಸಾವುಂಟಾಯಿತು?" ಪೋಲಿಸ್ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರು ಪ್ರಶ್ನಿಸಿದರು.

"ಈ ಗಾಯದಿಂದ ರಕ್ತ ನಷ್ಟವಾಗಿ ಸಾವುಂಟಾಗಿದೆ".

"ಈ ಗಾಯವಲ್ಲದೆ ದೇಹದ ಮೇಲೆ ಬೇರೆ ಗಾಯಗಳಾಗಿವೆಯೋ?"

"ಹೌದು ಬಲಗೆನ್ನೆಯ ಮೇಲೆ ಪೆಟ್ಟು ಬಿದ್ದಿದೆ" ಕೋರ್ಟಿನ
ಕೋಲಾಹಲವಾಯಿತು - ಈ ಮಾತು ಹೊಸ ಸುದ್ದಿಯಾಗಿತ್ತು.

"ಹೊಸ ಪೆಟ್ಟೆಂದು ನಿಮ್ಮ ಭಾವನೆಯೆ?"

"ಸಾವಿಗೆ ಅರ್ಧ ಗಂಟೆ ಮುಂಚೆ ಪೆಟ್ಟು ಬಿದ್ದಿರಬೇಕು."

"ತತ್‌ಕ್ಷಣ ಸಾವಿಗೆ ಕಾರಣವಾಗಿರಬಹುದಾದ ಕ್ರಿಯಾಪ
ಪರಿಗಳೇನು ಎಂಬುದನ್ನು—ವೈದ್ಯಕೀಯ ದೃಷ್ಟಿಯಿಂದ ಹೇಳುವಿರಾ?

"ಕೆನ್ನೆಗೆ ಬಿದ್ದ ಪೆಟ್ಟಿನಿಂದ ಜ್ಞಾನ ತಪ್ಪಿರಬೇಕು; ಆನಂತ
ಕುತ್ತಿಗೆಯನ್ನು ಕೊಯ್ದಿರಬಹುದು."

"ಚಾಕುವಿನಿಂದ ಕೊಯ್ಯದೆ ಬರೀ ಪೆಟ್ಟು ಮಾತ್ರ ಹಾಕಿದ್ದಿದ್ದ
ಸಾವುಂಟಾಗುತ್ತಿರಲಿಲ್ಲವಲ್ಲವೆ?"

"ಇಲ್ಲ."

"ಹೊಡೆದವನು ಮೇಜಿನ ಮೇಲಿದ್ದ ಹಣ ಹೊತ್ತುಕೊಂ
ಪರಾರಿಯಾಗುವ ವರೆಗೂ, ಮೂರ್ಛೆಯಿಂದೆಚ್ಚರವಾಗುತ್ತಿರಲಿಲ್ಲವೆಂ
ಭಾವಿಸುತ್ತೀರಾ?"

"ಹೇಳುವುದು ಕಷ್ಟ; ಪ್ರಾಯಶಃ ಮೂರ್ಛಿತನಾಗಿಯೇ ಇರು
ದ್ದನೆನ್ನಬಹುದು."

"ಅಂದ ಮೇಲೆ ಹೊಡೆದಾತ ಶೆಣೈಗೆ ಪರಿಚಯದವನಿರಬೇ
ಆದ್ದರಿಂದಲೇ ಜ್ಞಾನ, ಬಂದ ಮೇಲೆ ಹೊಡೆದವನು ಯಾರೆಂದು ಶೆ
ಹೇಳಬಲ್ಲನೆಂದೇ, ಚಾಕುವಿನಿಂದ ಕೊಯ್ದಿರಬೇಕಲ್ಲವೆ?"

"ನನ್ನ ಶಾಸ್ತ್ರಕ್ಕೆ ಸಂಬಂಧಿಸಿದ ವಿಷಯ" ಪ್ರಾಸಿಕ್ಯೂಟಿಂ
ಇನ್‌ಸ್ಪೆಕ್ಟರು ತಮ್ಮ ಪ್ರಶ್ನೆಗಳೆಲ್ಲ ಮುಗಿದವೆಂದು ತಲೆಯಲ್ಲಾಡಿಸಿ ಕ
ತರು. ಶಾಸ್ತ್ರಿಗಳೆದ್ದರು ಪಾಟೀಸವಾಲಿಗೆ—

"ಯಾವ ಕಡೆಯಿಂದ ಪೆಟ್ಟು ಬಿದ್ದಿರಬೇಕು ಡಾಕ್ಟರ್."

"ನೀವು ಕೇಳಿದ್ದು ಅರ್ಥವಾಗಲಿಲ್ಲ."

"ಬಲಗೆನ್ನೆಯ ಮೇಲೆ ಪೆಟ್ಟು ಬಿದ್ದಿದೆಯೆಂದಿರಿ. ಗಿರಾಕಿಗ
ಮೇಜಿನ ಮುಂದುಗಡೆ ನಿಲ್ಲುತ್ತಾರೆಂದು ಕೇಳಿದ್ದೇನೆ. ಅಲ್ಲಿ ನಿ

ಮೂರ್ಛೆ ಬೀಳುವಂತಹ ಪೆಟ್ಟನ್ನು ಬಲಗೆನ್ನೆ ಮೇಲಕ್ಕೆ ಹಾಕಲು ಸಾಧ್ಯವೆ?''

ಡಾಕ್ಟರು ಅನುಮಾನಿಸಿದರು.

"ಸಾಧ್ಯವಿಲ್ಲ—ಎಡಚನಾಗಿದ್ದರೆ ಹೊರತು"

"ಒಳ್ಳೇದು! ಅಂದರೆ ಹೊಡೆದವನು ಶೆಣೈಯ ಮುಂಭಾಗದಲ್ಲಿರಲಿಲ್ಲ. ಅವನ ಹಿಂಬದಿಯಲ್ಲಿ ಅಥವಾ ಪಕ್ಕದಲ್ಲಿರಬೇಕು ಅಂತಲ್ಲವೆ''

"ಅದು ನನಗೆ ಸಂಬಂಧಿಸದ ಅಂಶ"

"ಈ ಸರ್ತಿ ಹಾಗಲ್ಲ ಡಾಕ್ಟರ್. ಏಟು ಹೇಗೆ, ಎಲ್ಲಿಂದ ಬಿದ್ದಿರಬಹುದೆಂದು ಲೆಕ್ಕಿಸುವುದು ವೈದ್ಯಕೀಯ ಭಾಗ. ನನ್ನ ತರ್ಕ ಸರಿಯಾಗಿದೆಯಲ್ಲವೆ?''

''ಪ್ರಾಯಶಃ ಸರಿ. ಹೌದು, ಹಾಗೇ''

''ಥ್ಯಾಂಕ್ ಯೂ'' ಶಾಸ್ತ್ರಿಗಳು ಕುಳಿತರು.

ನಂತರದ ಸಾಕ್ಷ್ಯ ನಾಗಣ್ಣನದು. ಡಾಕ್ಟರ್ ಹೇಳಿದ ಹಾಗೆ ಕೆಳಗಿನಿಂದ ಶಬ್ದ ಕೇಳಿಸಿದ್ದು ಇತ್ಯಾದಿ ವಿವರಗಳನ್ನೇ ಪಡಿನುಡಿದ. ಶಬ್ದ ಏಟಿನ ಶಬ್ದವಿದ್ದರೂ ಇರಬಹುದೆಂದ. ಶಾಸ್ತ್ರಿಗಳು ಎಷ್ಟೋ ಪ್ರಯತ್ನ ಪಟ್ಟರೂ, ಅವನಿಂದ ಶಬ್ದದ ಸ್ವರೂಪವನ್ನು ಹೇಳಿಸುವುದಾಗಲಿಲ್ಲ.

ಅನಂತರ ನಗರದ ಬ್ಯಾಂಕ್ ಬ್ರಾಂಚಿನ ಮ್ಯಾನೇಜರ್ ನರಸಿಂಹ ಕಾಮತ್, ಶೆಣೈ ತಂದ ದುಡ್ಡು ಇತ್ಯಾದಿಗಳ ಬಗ್ಯೆ ಸಾಕ್ಷ್ಯವಿತ್ತರು. ಪ್ರತಿ ವಾರವೂ ಕಳಿಸುತ್ತಿದ್ದಂತೆ ಈ ಸಾರಿಯೂ ಮರವೇ ಹಳ್ಳಿ ಸಬ್ ಬ್ರಾಂಚಿಗೆ ಶೆಣೈ ಜೊತೆಯಲ್ಲಿ ರೂ. ೫೦೦೦ ಕಳಿಸಲಾಗಿತ್ತು; ರೂ. ೧೦೦೦ ನೂರು ರೂ.ಗಳ ನೋಟಿನಲ್ಲಿ ಉಳಿದ ೪೦೦೦ ರೂ. ಹತ್ತು, ಐದು ಮತ್ತು ಒಂದು ರೂ.ಗಳಲ್ಲಿ. ಕೊಲೆಯಾದ ದಿನ ಪೋಲೀಸರಿಂದ ತಂತಿ ವಾರ್ತೆ ಬಂದೊಡನೆ ಕಾಮತ್ ಕಾರು ಹಾಕಿಕೊಂಡು ಬಂದಿದ್ದರು. ಇನ್ಸ್‌ಪೆಕ್ಟರ ಸಮ್ಮುಖದಲ್ಲಿ ಹಣ ಕಾಸನ್ನೂ ಲೆಖ್ಖವನ್ನೂ ಪರಿಶೀಲಿಸಿದ್ದರು.

ನಗರದಿಂದ ತಂದಿದ್ದ ರೂ. ೫೦೦೦ದ ಜೊತೆಗೆ ಮತ್ತೆ ೯೫೦೦ ರ
ಚಿಲ್ಲರೆ ಜಮಾ ಆಗಿತ್ತು. ಈ ಮೊಬಲಗೆಲ್ಲ ಒಹು ಸಾಲು ೧,೫,೧೦ ರ
ಗಳ ನೋಟುಗಳೆ. ಈ ಪೈಕಿ ರೂ. ೪೫೦೦ ಗಿರಾಕಿಗಳಿಗೆ ಪಾ
ವಾಗಿತ್ತು. ನಗದನ್ನು ಪರಿಶೀಲಿಸಿದಾಗ ನೂರು ರೂ.ಗಳ ನೋ
ಗಳಷ್ಟು, ಚಿಲ್ಲರೆಯಷ್ಟು ಇದ್ದು ರೂ. ೮೦೬೦ ೧, ೫, ೧೦ ರೂ.
ನೋಟುಗಳು ಕಾಣೆಯಾಗಿದ್ದವು. ನೂರು. ರೂ.ಗಳ ನೋಟುಗ
ನಂಬರಿನಿಂದ ಪತ್ತೆಯಾಗಬಹುದು. ಬೆಳ್ಳಿ ನಾಣ್ಯ ಭಾರ ಎಂದು ಅ
ನ್ನೆಲ್ಲ ಬಿಟ್ಟು, ಕೊಲೆಗಾರ ಚಿಲ್ಲರೆ ನೋಟುಗಳಷ್ಟನ್ನೆ ಎತ್ತಿರಬೇ
ಎಂದು ಮ್ಯಾನೇಜರ ತರ್ಕ. ಶಾಸ್ತ್ರಿಗಳು ಮ್ಯಾನೇಜರಿಗೆ ಎರ
ಪ್ರಶ್ನೆ ಹಾಕಿದರು. "ಈ ಬ್ಯಾಂಕು ಶಾಖೆಗೆ ಬರುವ ಗುಮಾಸ್ತ
ತಮ್ಮ ಜೀವ, ತಮ್ಮೊಂದಿಗಿರುವ ದುಡ್ಡು ಇವನ್ನು ರಕ್ಷಿಸಿಕೊಳ್ಳ
ಸಲುವಾಗಿ ಏನಾದರೂ ಸಲಹೆಗಳನ್ನು ಕೊಟ್ಟಿರುತ್ತೀರಾ?"

"ಹೌದು ಗಿರಾಕಿಗಳನ್ನೆಲ್ಲ ಎದುರಿಗೆ ಮೇಜಿನ ಬಳಿ ಹಾಕಿರು
ಕುರ್ಚಿಗೇ ಬರುವಂತೆ ಹೇಳಬೇಕು; ಯಾತನ್ನೂ ಪಕ್ಕಕ್ಕಾಗಲಿ ಹಿಂ
ಗಾಗಲಿ ಬರಲು ಬಿಡಕೂಡದು—ಎಂದು ಶೆಣೈಗೆ ಸಾರಿ ಹೇಳಿದ್ದೆ
ಯಾರೆಂದು ತಿಳಿಯದೆ ಹತ್ತಿರ ಸೇರಿಸಲು ಅವಕಾಶವೇ ಇರಲಿಲ್ಲ".

"ನನ್ನ ಕಕ್ಷಿಯನ್ನು ಸ್ನೇಹಿತನಂತೆ ಶೆಣೈ ಭಾವಿಸಿದ್ದರೆ?" ಕಾವ
ರಿಗೆ ಸ್ವಲ್ಪ ಕಸಿವಿಸಿಯಾಯಿತು. ಸ್ವಲ್ಪ ನಿಧಾನಿಸಿ.

"ಹಾಗೇನೂ ಭಾವಿಸಿರಲಿಲ್ಲವೆಂದೇ ಹೇಳಬೇಕು. ಹನುಮಂತ
ಆತನಿಗೆ ಹೆಚ್ಚಿನ ಪರಿಚಯುದವನಲ್ಲ''

''ಇನ್ನೊಂದು ಅಂಶ. ಕೊಲೆಪತ್ತೆಯಾದಾಗ ಮೇಜಿನ ಮೇ
ಬಹಳ ದುಡ್ಡಿತ್ತೆ?''

''ಕಾಣೆಯಾಗಿದ್ದು ಹೊರತು ಉಳಿದ್ದೆಲ್ಲ ಇದ್ದೇ ಇತ್ತು. ರ
ದಿಂದ ತೋಯ್ದು ಹೋಗಿತ್ತು."

''ಗಿರಾಕಿಯೊಬ್ಬ ವ್ಯವಹಾರಕ್ಕೆ ಬಂದಾಗ ಆ ನಾಣ್ಯಗಳ
ನೋಟಿನ ರಾಶಿ ಎಲ್ಲಾ ಮೇಜಿನ ಮೇಲೆ ಇರುತ್ತವೆಯೋ?''

"ಉಹೂ! ದೊಡ್ಡ ನೋಟುಗಳನ್ನು ಬೇಕಾದಾಗ ಹೊರತು ಬಾಕಿಯಂತೆಲ್ಲ ಮೇಜಿನೊಳಗಿನ ತಗಡಿನ ಪೆಟ್ಟಿಗೆಯಲ್ಲಿಡಲಾಗುತ್ತದೆ"

"ಹಾಗಾದರೆ ಅವೆಲ್ಲ ಮೇಜಿನ ಮೇಲಕ್ಕೇಕೆ ಬಂದಿರಬಹುದು?"

'ಬ್ಯಾಂಕು ಕಾರ್ಯ ಮುಗಿದ ಮೇಲೆ ಕೊನೆಯಲ್ಲಿ ನಗದನ್ನು ಎಣಿಸುವ ಸಲುವಾಗಿ ಮೇಜಿನ ಮೇಲೆ ಇಟ್ಟಿರಬೇಕು"

"ಆ ರೀತಿ ಎಣಿಕೆಗೆ ತೊಡಗುವುದು ಗಿರಾಕಿಗಳೊಬ್ಬರೂ ಇಲ್ಲದಂತೆ ಹೊರಟು ಹೋದ ಮೇಲಲ್ಲವೇ?"

"ಹೌದು"

"ಥ್ಯಾಂಕ್ಸ್, ಕಾಮತ್"

ಗೆಲುವನ್ನು ಸೂಸುವ ಮುಗುಳ್ನಗೆ ಬೀರುತ್ತ ಶಾಸ್ತ್ರಿಗಳು ಕುಳಿತರು. ಉಳಿದ ಸಾಕ್ಷಿಗಳು ಬಂದಿಯ ನಡತೆ, ವ್ಯವಹಾರ, ಸ್ಥಿತಿಗತಿಗಳ ಬಗ್ಗೆ ವಿವರಣೆ ಕೊಟ್ಟರು. ಹನುಮಂತಪ್ಪ ದರ್ಜಿ; ಒಳ್ಳೆ ಕಸಬುಗಾರ. ಅವನ ಹೊಲಿಗೆ ಊರಿಗೆ ಪ್ರಸಿದ್ಧಿ; ಆದಾಯವೂ ಚೆನ್ನಾಗಿತ್ತು. ಆದರೆ ಕುಡಿತಕ್ಕೂ ಜೂಜಿಗೂ ಬಿದ್ದು ಸದಾ ಸಾಲಗಾರನಾಗಿಯೇ ಇದ್ದ. ಒಟ್ಟಿನಲ್ಲಿ ಇಂತಹ ಪಾಪಕೆಲಸ ಮಾಡುವುದಕ್ಕೆ ಇವನೇ ಸರಿ ಎಂಬ ಭಾವನೆ ಬೆಳೆದಿತ್ತು.

ಈ ಸಾಕ್ಷ್ಯವನ್ನೆಲ್ಲ ಶಾಸ್ತ್ರಿಗಳು ಕಡೆಗಣ್ಣಿನಿಂದ ನೋಡಿದರು. ಕೆಲವಂತೂ ಅವರಿಗೆ ಅನುಕೂಲವಾಗಿಯೇ ಕಂಡಿತು. ಶೆಣೈ ಇವನ ಮೇಲೆ ಹದ್ದಿನ ಕಣ್ಣಿಟ್ಟಿರಬೇಕೆಂದೇ ಅವುಗಳಿಂದ ಹೊರಪಟ್ಟಿತು.

ಪೋಲೀಸರು ಕೇಸನ್ನು ಮುಂದಕ್ಕೆ ಹಾಕಬೇಕೆಂದು ಕೇಳಿರಲಿಲ್ಲ. ಸಾಕ್ಷ್ಯವೆಲ್ಲ ಬಹುಬೇಗ ಮುಗಿದು ಹೋಗಿತ್ತು. ಇನ್ನು ಮಧ್ಯಾಹ್ನದ ಮೊದಲು ಶಾಸ್ತ್ರಿಗಳು ಎದ್ದು ನಿಂತು ನನ್ನ ಕಕ್ಷಿಯ ಸಾಕ್ಷ್ಯ ತೆಗೆದುಕೊಳ್ಳಬಹುದೆಂದರು. ಕೋರ್ಟಿನಲ್ಲಿದ್ದವರನ್ನು ಈ ಮಾತು ವಿಸ್ಮಯಗೊಳಿಸಿತು. ಮೊದಲಲ್ಲೇ ಆಪಾದಿತ ಹೇಳಿಕೆ ಕೊಡುವುದು ಅಪುರೂಪ. ಹನುಮಂತಪ್ಪನ ಸಾಕ್ಷಿ ಬೇರೆ: ತಾನು ನಿರಪರಾಧಿ, ತನ್ನ ಮೇಲಿನ ಸಾಕ್ಷ್ಯ ಸಾಹಿತ್ಯ ಬಲವಿಲ್ಲದ್ದು ಎಂದು ಅವನಿಗೆ ಚೆನ್ನಾಗಿ ಖಚಿತವಾಗಿ ತನ್ನ ಕಥೆ ಹೇಳಿಬಿಟ್ಟು ತನ್ನ ತುರ್ತಿನ ಕೆಲಸ ಕಾರ್ಯಗಳನ್ನು

ಕೈಗೊಳ್ಳಲು ಹೋಗಬೇಕೆಂಬ ಆಸಕ್ತಿ ಅವನಲ್ಲಿ ತುಳುಕುತ್ತಿತ್ತು. ತ
ಕತೆ ಹೇಳಿದ ಮೇಲೆ ತನ್ನನ್ನು ಬಿಟ್ಟು ಬಿಡುತ್ತಾರೆಂಬ ದೃಢಸಂಬ
ಅವನಲ್ಲಿ. ಇದುವರೆಗೆ ಹೊರಬಿದ್ದ ಸಾಕ್ಷ್ಯ-ಸಾಹಿತ್ಯಗಳ ಆಧಾ
ಮೇಲೆ ಹನುಮಂತಪ್ಪನನ್ನು ಪೋಲೀಸರು ಬಂಧನದಲ್ಲಿಟ್ಟುಕೊಳ್ಳ
ದಕ್ಕೆ ಕಾರಣಗಳಿಲ್ಲವೆಂದು ಶಾಸ್ತ್ರಿಗಳೂ ಬಗೆದರು.

ಮ್ಯಾಜಿಸ್ಟ್ರೇಟರು ಈ ಮಾತಿಗೆ ಸ್ವಲ್ಪ ವಿರೋಧ ಸೂಚಿಸಿದರಾದ
ಬೇಡವೆನ್ನಲಿಲ್ಲ.

ಹನುಮಂತಪ್ಪ ಎತ್ತರವಾದ ಆಳು; ದೃಢಾಂಗ ಸುಂದರ ಮು
ಯುವಕ ಎದ್ದು ನಿಂತು ತನ್ನ ಕಥೆ ಹೇಳಿದ. ತನ್ನ ಹತ್ತಿರ ಇದ್ದ
ರೂ. ೪೫ರ ಚೆಕ್ಕೊಂದು; ಅದನ್ನು ಕ್ಯಾಷ್ ಮಾಡಿಸುವ ಸಲುವಾಗಿ
ಬ್ಯಾಂಕಿಗೆ ಹೋದದ್ದು; ಅಲ್ಲಿಂದ ಹೊರಬಿದ್ದದ್ದು ೫ ರೂ.ಗಳ ೯ ನೋ
ನೊಡನೆ. ತಾನು ಸಾಲಗಾರ ನಿಜ—ಆದರೇನು? ೮೦೦೦ ರೂ.ಗಳ
ತೆಗೆದುಕೊಂಡಿದ್ದರೆ ಹಣವೇನಾಯಿತು? ಬ್ಯಾಂಕಿನಿಂದ ಅರ್ಧ ಫರ್ಲಾಂ
ದೂರದಲ್ಲಿ ಸ್ವಾಮಿ ಭೇಟಿಯಾಗಿದ್ದ. ಇಬ್ಬರೂ ಹತ್ತಿರದ ಕೆಫೆಗೆ ಕ
ಕುಡಿಯಲು ಹೋಗಿದ್ದರು. ಇನ್‌ಸ್ಪೆಕ್ಟರ್ ನಾರಾಯಣರಾ
ಬಂದು ದಸ್ತಗಿರಿ ಮಾಡುವವರೆಗೂ ತಾನು ಅಲ್ಲಿಯೇ ಕುಳಿತಿದ್ದನೆಂ
ದನ್ನೂ ಅಲ್ಲಿದ್ದ ಜನಗಳ ಸಾಕ್ಷ್ಯ ಬೆಂಬಲದಿಂದ ದೃಢಪಡಿಸಿ ತೋರಿಸ
ಸಿದ್ಧನಿದ್ದ.

ಈ ಮಾತನ್ನು ಮಿಕ್ಕವರೂ ಪುಷ್ಟೀಕರಿಸಿದ್ದರು. ೮೦೦೦ ರ
ಗಳ ನೋಟನ್ನೂ ಕೆಫೆಯಲ್ಲಿ ಬಚ್ಚಿಡಲು ಸಾಧ್ಯವೆ? ಸ್ವಾ
ಸಾಕ್ಷ್ಯ ನುಡಿಯುವಾಗ ಹನುವಂತಪ್ಪ ಬ್ಯಾಂಕಿನಿಂದ ಹೊರ ಬಂ
ದನ್ನು ತಾನು ದೂರದಿಂದಲೇ ನೋಡಿದುದಾಗಿ ಹೇಳಿದ್ದ. ಅಂದಮೇ
ಆಪಾದಿತನಿಗೆ ಕದ್ದ ನೋಟುಗಳನ್ನು ದಸ್ತಗಿರಿಯಾಗುವ ಮುನ್ನ ಬ
ಡುವ ಅವಕಾಶವೇ ಸಿಗಲಿಲ್ಲ; ಸ್ವಾಮಿಗಂತೂ ಆ ನೋಟುಗಳ
ಆತ ಕೊಟ್ಟಿರಲಿಲ್ಲ.

೦೦೦

"ಈ ಕೇಸಿನ ಪರಿಶೀಲನೆ ತೃಪ್ತಿಕರವಾಗಿಲ್ಲ, ಆನಂದರೆ!" ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರು ಟೀಕಿಸಿದರು. "ಹನುಮಂತಪ್ಪನ ನಡತೆ ಎಂತಹುದೆಂದು ಬೇಕಾದರೂ ಸಿದ್ಧಗೊಳಿಸ ಬಹುದು; ಶೆಣೈ ಜೊತೆಗೆ ಕೊನೆಗೆ ಇದ್ದವನು ಅವನೇ ಎನ್ನ ಬಹುದು; ಚಾಕುವಿದ್ಯೆ ಗೊತ್ತು. ಕೊಲೆಗೂ ಹೇಸದ ಕ್ರೂರಿ, ಜೂಜುಕೋರ, ಬರುವ ಸೋಮ ವಾರ ಬಾಕಿ ಚುಕ್ತ ಮಾಡಲೇ ಬೇಕೆಂದು ಅವನಿಗೆ ಪಠಾಣನೊಬ್ಬ ತೀವ್ರ ಎಚ್ಚರಿಕೆ ಕೊಟ್ಟದ್ದೂ ನಿಜ—ಎಲ್ಲಾ ಸರಿ ಆದರೆ ಹಣವೆಲ್ಲಿ ಹೋ ಯಿತು? ಯಾರೋ ಜೊತೆಗಾರ ಹಿಂಬದಿಯಿಂದ ಬಂದು ಕಾದಿದ್ದು ಇವನಿಂದ ಹಣತೆಗೆದು ಕೊಂಡ ಎನ್ನುವುದಾದರೆ ಡಾಕ್ಟರ್ ಶ್ರೀಧರ, ನಾಗಣ್ಣ ಮೇಲೆ ಇದ್ದರು, ನಾಗಣ್ಣನ ಸೋದರ ಸೊಸೆ ಯಾವಾಗಲೂ ಕೆಳಗಡೆಯೇ ಇರುತ್ತಿದ್ದವಳು ಎಲ್ಲೋ ಹೋಗಿದ್ದಳು. ಲೆಕ್ಕವೇನೋ; ಸರಿಹೋಗುತ್ತೆ ಹಾಗೆಂದರೆ ಈ ಕೃತ್ಯ ಪೂರ್ವಸಿದ್ಧತೆಗಳಿಂದ ನಡೆಸಿದ ಕೃತ್ಯವೆನ್ನ ಬೇಕಾಗುತ್ತೆ. ಆಲೋಚನೆ ಮಾಡಿದರೆ ಹಾಗನ್ನಿಸುವುದಿಲ್ಲ. ಜೊತೆಗೆ ಯಾರೋ ಇದ್ದರೆಂಬ ಕಟ್ಟು ಕತೆಯನ್ನು ನಾನು ನಂಬು ವುದೂ ಇಲ್ಲ.

ಬ್ಯಾಂಕ್ ಮ್ಯಾನೇಜರ ಸಾಕ್ಷ್ಯದಲ್ಲೇನೂ ಇಲ್ಲ. ಬ್ಯಾಂಕಿನ ಪ್ರಧಾನ ಶಾಖೆಯವರಿಗೇ ಜಿಗುಪ್ಸೆಯಾಗಿದೆ; ಆದ್ದರಿಂದಲೇ ನೀವು ಬರ ಬೇಕಾಯ್ತು. ನಿಮಗೇನೆಲ್ಲ ಸಹಾಯ ಬೇಕೊ ಅವನ್ನೆಲ್ಲ ಒದಗಿಸಲು ನಾನೂ ಇನ್ಸ್‌ಪೆಕ್ಟರ್ ಇಬ್ಬರು ಸಿದ್ಧರಿದ್ದೇವೆ"

"ಥ್ಯಾಂಕ್ಸ್ ಸಾರ್" ಎಂದ ಆನಂದ. "ಆಗಲಿ ನಾನು ಬಂದದ್ದು —ನಾನು ಅಂದರೆ ಪತ್ತೇದಾರಿ ಶಾಖೆಯವನು—ಬಂದಿದ್ದು ಯಾವ ಸ್ಥಳೀಕ ಪೋಲೀಸರಿಗೂ ಹಿಡಿಸುವುದಿಲ್ಲ. ನಿಜ ಆದರೇನು? ಇಲ್ಲಿಗೆ ಹೋಗುವಂತೆ ಆಜ್ಞೆಯಾಗಿದೆ, ಬಂದಿದ್ದೇನೆ ಕೆಲಸಕ್ಕೆ ಕೈಹಚ್ಚುತ್ತೇನೆ".

ಸೂಪರಿಂಟೆಂಡೆಂಟರು ತಲೆಯಾಡಿಸಿದರು "ಏನಾದರೂ ವಿಶೇ ಷಾಂಶಗಳನ್ನು ಕೇಳಬೇಕೆಂದಿದ್ದರೆ ಕೇಳಿ"

ಮನೆಶೋಧಿಸಿದಿರಾ? ನೋಟಿನ ಕಟ್ಟನ್ನು ಅಲ್ಲೇ ಎಲ್ಲಾದರೂ ಬಚ್ಚಿಟ್ಟದ್ದು ಅನಂತರ ಸಾಗಿಸುವ ಪ್ರಯತ್ನ ಮಾಡಿರಲಾರನಷ್ಟೆ?"

"ಅದೂ ಸಾಧ್ಯ. ಆದರೆ ಇನ್ಸ್‌ಪೆಕ್ಟರು ಮನೆಯನ್ನೆಲ್ಲ ಶೋ
ದರು—ಏನಾದರೂ ಸಿಕ್ಕಿತೆ ನಾರಾಯಣ ರಾಯರೆ?"

"ಇಲ್ಲಾ ಸಾರ್"

ಪತ್ತೇದಾರಿ ಶಾಖೆಯ ಆನಂದ ಸ್ವಲ್ಪ ಹೊತ್ತು ಮೌನವಾಗಿ
"ಒಂದೆರಡು ವಿಷಯ ಕೇಳಬೇಕು. ಹೋಗಲಿ ಅಲ್ಲಿ ಸುತ್ತಿ ನ
ಉತ್ತರ ಪಡೆಯಲೆಳಸುತ್ತೇನೆ. ಆನಂತರ ನಾರಾಯಣ ರಾ
ಹತ್ತಿರ ಮಾತನಾಡುತ್ತೇನೆ" ಎಂದ.

"ನೀವಿಬ್ಬರೇ ನೋಡಿಕೊಳ್ಳಿ. ನಾನೇಕೆ?" ಸೂಪರಿಂಟೆಂಡೆ
ನುಡಿದರು.

ಆನಂದ ಅಲ್ಲಿಂದೆದ್ದು ಸೆಟ್ಟಿಗೆ ನಾಗಣ್ಣನ ಮನೆ ಸೇರಿದ.
ರಿಗೆ ನಾಗಣ್ಣನ ಸುಂದರ ಸೋದರ ಸೊಸೆ ಕಾಣಿಸಿಕೊಂಡಳು. ಅವ
ತನ್ನ ಪರಿಚಯ ವಿವರ ತಿಳಿಸಿ, ಒಂದರ್ಧ ಗಂಟೆ ಕೆಳಗಿನ ಮನೆ
ತಾನೊಬ್ಬನೇ ಇರಬಯಸುವುದಾಗಿ ನುಡಿದ. ತನ್ನ ಮಾವನ ಶುಶ್ರೂ
ಗೆಂದು ಅವಳು ಮಹಡಿ ಹತ್ತಿದ ಮೇಲೆ, ಆನಂದ ಕೊಲೆಯ
ಸ್ಥಳದ ಪರಿಶೀಲನೆ ನಡೆಸಿದ. ನಾಗಣ್ಣನ ಮನೆಯ ಹೊರಬಾಗಿ
ಪ್ರವೇಶಿಸಿದರೆ ಸಿಕ್ಕುವುದು ಸಣ್ಣ ಹಾದಿ; ಅಲ್ಲೇ ಬಲ ಗೋಡೆಯಲ್ಲಿ
ಬಾಗಿಲೇ ಬ್ಯಾಂಕಿನ ಕೋಣೆ ಬಾಗಿಲು. ಮುಂಬಾಗಿಲಿಗೆ ಎದು
ಹಾದಿಯ ಕೊನೆಯಲ್ಲಿದ್ದ ಬಾಗಿಲು ಅಡುಗೆ ಮನೆಯದು. ಅ
ಮನೆಯ ಹಿಂದೆ ಒಂದು ಸಣ್ಣ ಕೋಣೆ. ಅಲ್ಲಿಂದಾಚೆ ಹಿತ್ತಲು. ಅ
ಮನೆಯಲ್ಲೆ ಮಹಡಿ ಮೆಟ್ಟಲು. ಕೊಲೆಯಾದ ದಿನ ಜನಗಳ ಗ
ಸೆಳೆಯುವುದಕ್ಕಾಗಿ ಡ್ರೈವರ ಕುಟ್ಟಿದ ಮೆಟ್ಟಲುಗಳು ಇವೇ. ಆವರ
ಪರಿಚಯ ಮಾಡಿಕೊಂಡ ಆನಂದ. ಸೀದಾ ಬ್ಯಾಂಕ್ ಕೋಣೆಗೆ ಬ
ಮೇಜು ಕುರ್ಚಿಗಳನ್ನು ಇನ್ಸ್‌ಪೆಕ್ಟರ್ ವಿವರಿಸಿದ್ದಂತೆ ಜೋ
ಕುರ್ಚಿಯ ಮೇಲೆ ತಾನೆ ಕುಳಿತು ಸುತ್ತ ನೋಡಿದ

ಮುಂಬದಿಯ ಮೇಜು ದೊಡ್ಡದು. ಮೇಜಿನ ಆಚೆ ಬದಿಯ
ಒಂದೇ ಬಾರಿಗೆ ನೆಗೆದು ಬಲಕೆನ್ನೆಯ ಮೇಲೆ ಮೂರ್ಛೆಬರುವಂ
ಪೆಟ್ಟು ಕೊಡುವುದು ಆಗದ ಮಾತು. ಹಾಗೆ ಯಾರಾದರೂ ನೆ

ಮೇಲೆ ಬೀಳುವ ಸಾಹಸ ಮಾಡಿದ್ದರೆ, ಶೆಣೈಗೆ ರಕ್ಷಣಾ ಪ್ರಯತ್ನಕ್ಕೆ ತಕ್ಕಷ್ಟು ಅವಕಾಶವಿರುತ್ತಿತ್ತು. ಕುರ್ಚಿಬಿಟ್ಟು ಏಳಬಹುದಿತ್ತು; ಕಡೆಗೆ ಕೂಗಬಹುದಿತ್ತು.

"ಅಂದರೆ ಕೊಲೆಗಡುಕ ಸಾಧಾರಣ ಗಿರಾಕಿಯಲ್ಲವೇ ಅಲ್ಲ. ಅತಿ ಪರಿಚಿತನಿರಬೇಕು. ಇಲ್ಲವೇ ಎಲ್ಲೋ ಅವಿತುಕೊಂಡಿದ್ದು ಮೇಲೆಬಿದ್ದಿರಬೇಕು. ಆನಂದನ ದೃಷ್ಟಿ ಮತ್ತೆ ಕೋಣೆಯ ಸುತ್ತೆಲ್ಲ ಹರಡಿತು; ಎಡಗಡೆ ಇದ್ದ ಬೃಹದಾಕಾರದ ಸೈನ್ ಬೋರ್ಡಿನ ಹಿಂದೆ ಅವಿತಿದ್ದು ಮೇಲೆ ಬಿದ್ದಿರಬಹುದೆ? ಗುಪ್ತವಾಗಿ ಕುಳಿತಿರಲು ಅಲ್ಲೆಲ್ಲಿದೆ ಸ್ಥಳ? ಬಲಗಡೆಯಲ್ಲಿ ಸೋಫವಿದೆ; ಕೆಳಗೆ ಅಡಗಲು ಸ್ಥಳವೇನೋ ಇದೆ. ಆದರೆ ಶಬ್ದ ಮಾಡದೆ ಹೊರಕ್ಕೆ ಬರಲು ಸಾಧ್ಯವೆ?

ಇನ್ಸ್‌ಪೆಕ್ಟರು ಕೊಟ್ಟಿದ್ದ ಮಹಜರು ವರದಿಯ ಪ್ರತಿಯೊಂದನ್ನು ಜೇಬಿನಿಂದ ಆನಂದ ತೆಗೆದು ನೋಡತೊಗಿದ. ಸ್ವಲ್ಪ ಹೊತ್ತು ಹಾಗೆ ನೋಡುತ್ತಿದ್ದು, ಕುರ್ಚಿಯಿಂದಿದ್ದು ಓಣಿಗೆ ಬಂದ. ಅಡಗಲಲ್ಲೆಲ್ಲೂ ಅವಕಾಶವಿಲ್ಲ. ಅಡುಗೆ ಮನೆಗೆ ನುಗ್ಗಿದ ಅದರ ಬಾಗಿಲು ಹಾಕಿ ಚಿಲಕ ಕೈಲಿ ಹಿಡಿದು ಬಿರುಕಿನಿಂದ ಬ್ಯಾಂಕಿನ ಕೋಣೆಯೆಡೆ ನೋಡತೊಡಗಿದ. ಸ್ವಲ್ಪ ಹೊತ್ತಿನ ನಂತರ ಬಾಗಿಲು ಬಿಟ್ಟು ಮಹಡಿ ಮೇಲಿನ ಬಳಿ ಹೋಗಿ ನಾಗಣ್ಣನ ಸೋದರ ಸೊಸೆಯನ್ನು ಕೂಗಿದ. ಬಾಗಿಲು ತೆರೆದು ಸುಂದರಿ ಬಂದಳು. ಅವಳಿಗೆ ಕೆಲವು ಸೂಚನೆಗಳನ್ನು ಕೊಟ್ಟು ಆನಂದ ಮಹಡಿ ಮೇಲೇರಿ ನಾಗಣ್ಣನ ಬಳಿಬಂದ.

ನಾಗಣ್ಣ ಒಂದೇ ಮಾತಿಗೆ ನಡೆದ ಕತೆ ಹೇಳಿದ; ಅದರಲ್ಲಿ ವಿಶೇಷವೇನೂ ಇರಲಿಲ್ಲ. ನಾಗಣ್ಣನ ಮಾತು ಸಾಗಿದ್ದಾಗಲೆ ಕೆಳಗಿನಿಂದ ಕೈಯಿಂದ ಮರಕ್ಕೆ ಹೊಡೆದಂತೆ ಮೂರು ಸಾರೆ ಕೇಳಿಬಂತು. ನಾಗಣ್ಣ ಏನೂ ಗಮನಿಸದೆ ಮಾತು ಮುಂದುವರಿಸಿದ. ಸ್ವಲ್ಪ ಹೊತ್ತಾದ ಮೇಲೆ ಕುರ್ಚಿಯನ್ನು ನೆಲದ ಮೇಲೆ ಎಳೆದಂತೆ ಅಡುಗೆ ಮನೆಯಿಂದ ಕೇಳಿಬಂತು. ಅದಕ್ಕೂ ನಾಗಣ್ಣ ಗಮನ ಕೊಡಲಿಲ್ಲ.

"ಅವತ್ತು ಕೇಳಿಸಿದ ಶಬ್ದದಂತಿದೆಯೆ?"

"ಏನು"

"ಕೆಳಗಿನಿಂದ ಕೇಳಿಸಿದ ಶಬ್ದ"

"ಕೇಳಿಸ... ಓ ಅದೋ ತರಹ ಹೆಚ್ಚು ಕಡಿಮೆ"

"ಯಾವ ತರಹ ಮೊದಲು ಕೇಳಿಸಿತಲ್ಲ ಅದರಂತೋ, ಏರ
ತರಹದ ಹಾಗೋ?" ನಾಗಣ್ಣನ ದೃಷ್ಟಿ ಕೇಂದ್ರೀಕರಿಸಿತು ಸ್ವಲ್ಪ
ಮೂಡಿತು. "ಏನು ನಿಮ್ಮ ಉದ್ದೇಶ"

"ಅವತ್ತು ಖಂಡಿತ ನಿಮಗೆ ಶಬ್ದ ಕೇಳಿಸಿತೆ ನಾಗಣ್ಣ?"

"ಕೇಳಿಸ್ತು ಡಾಕ್ಟರು ಅದೆಂತ ಶಬ್ದ ಎಂದು ಕೇಳಿದರು, ಬ
ಹಾಕುವ ಶಬ್ದ ಅಂದೆ ನಾನು"

"ಈಗ ಕೇಳಿಸ್ತಲ್ಲ ಆ ತರಹೇನೆ?"

ನಾಗಣ್ಣನಿಗೆ ಒಳ್ಳೇ ಇಕ್ಕಟ್ಟಾಯಿತು. ಅವನಿಗೇನೂ ಕೇ
ಇಲ್ಲ. ಕೇಳಿಸಿರಲಿಲ್ಲವೆಂದು ಹೇಳುವಂತಿಲ್ಲ. ಆದರೆ ಆನಂದ
ಹೊತ್ತಿಗೆ ಎಷ್ಟೋ ಅಂಶ ಬಯಲಾಗಿತ್ತು.

ಆನಂದ ಪೋಲೀಸ್ ಸ್ಟೇಷನಿಗೆ ಹಿಂತಿರುಗಿ ನಾರಾಯಣರಾ
ಗಂಟುಬಿದ್ದ.

"ಅವತ್ತೇನಾದರೂ ಬೆರಳು ಗುರುತುಗಳು ಸಿಕ್ಕಿತೇನು?

ಇನ್ಸ್‌ಪೆಕ್ಟರು ಮೇಜಿನ ಖಾನೆಯೆಳೆದು ಎರಡು ಮೂರು ಛಾ
ಚಿತ್ರಗಳನ್ನು ತೆಗೆದುಹಾಕಿದರು. ಜೊತೆಗೆ ಮಾತನ್ನು ಕೂಡಿ
ಇಷ್ಟೇನೆ ಸಿಕ್ಕಿದ್ದು ಉಪಯೋಗವಿಲ್ಲ. ಚಾಕುವಿನ ಮೇಲೆ ಏನ
ಲಿಲ್ಲ. ತಗಡಿನ ಪೆಟ್ಟಿಗೆ ಮೇಲೆ ಶೆಣೈ ಬೆರಳುಗಳದೇ ಗು
ಒಂದಷ್ಟು ಕಡೆ ನಾಗಣ್ಣನ ಸೊಸೆ ಕೈಬೆರಳ ಗುರುತು. ಅವು
ಇದೊಂದು — ಇದರಿಂದ ನಿಮಗೆ ಏನಾದರೂ ಅರ್ಥವಾಗುವಂ
ಎಂದು ಎರಡು ಮೂರು ಗುರುತಿದ್ದ ಛಾಯಾ ಚಿತ್ರವನ್ನು ಆನ
ಡೆಗೆ ಎಸೆದರು. ಬೆರಳುಗಳನ್ನು ಜೊತೆಗೂಡಿಸಿ ಹಿಡಿದಂತಿತ್ತು. ಆ
ಎಂದೂ ನೋಡಿರದಂತಹ ಗುರ್ತು ಅದು. ನಾನಾ ಬಗೆಯ ಸುರು
ರುವುದರಿಂದ ಕೈಬೆರಳ ಗುರುತುಗಳ ಆಧಾರದ ಮೇಲೆ ಒಬ್ಬನ
ಮತ್ತೊಬ್ಬನದನ್ನೂ ಬೇರೆ ಬೇರೆಯದೆಂದು ಗುರುತಿಸುವುದು ಸ

ಆದರೆ ಈ ಚಿತ್ರದಲ್ಲಿದ್ದ ಗುರುತಿನಲ್ಲಿ ರೇಖೆಗಳು ವಕ್ರವಾಗಿರದೆ ಎಲ್ಲಾ ನೇರವಾಗಿದ್ದವು. ಅವನ್ನೂ ಆನಂದ ತೀವ್ರವಾಗಿ ದೃಷ್ಟಿಸಿದ.

"ಎಲ್ಲಿತ್ತು ಈ ಗುರುತು"

"ಅಡುಗೆ ಮನೆಗೂ ಓಣಿಗೂ ಮಧ್ಯ ಇರುವ ಬಾಗಿಲ ಒಳ ಭಾಗದ ಹಿಡಿಯ ಮೇಲೆ.

"ಸರಿ, ಸರಿ, ಸೊಗಸಾದ ಅಂಶ" ಎಂದ ಆನಂದ.

০০০

"ಡಾಕ್ಟರ್ ನಿಮ್ಮನ್ನು ಈ ಮುಂಚೆಯೇ ನಾನು ನೋಡಬೇಕಾಗಿತ್ತು—ಈ ಕೇಸಿನಲ್ಲಿ ನೀವೇ ಪ್ರಧಾನ ಸಾಕ್ಷಿ—ನಿನ್ನೆ ಮಧ್ಯಾಹ್ನ ನಾ ಬಂದಾಗ ನೀವಿರಲಿಲ್ಲ. ಸಂಜೆ ನಗರಕ್ಕೆ ಹೋಗಿದ್ದೆ ಈಗ ಬಂದೆ.

ಡಾಕ್ಟರ್ ಶ್ರೀಧರನ ಕನ್ಸಲ್ಟಿಂಗ್ ಕೋಣೆಯಲ್ಲಿ ರೋಗಿಗಳು ಕೂರುವ ಕುರ್ಚಿಯಲ್ಲಿ ಆನಂದ ಕುಳಿತಿದ್ದ. ಡಾಕ್ಟರದು ದೃಢಕಾಯ ಆನಂದ ಬಂದಾಗ ರೋಗಿಯ ರೋಗಚರಿತ್ರೆ ಬರೆಯುತ್ತಿದ್ದ.

ಮ್ಯಾಜಿಸ್ಟ್ರೇಟರ ಮುಂದೆ ನೀವು ಕೊಟ್ಟ ಸಾಕ್ಷ್ಯದ ವಿವರ ಓದಿದ್ದೇನೆ. ವೈದ್ಯಕೀಯ ದೃಷ್ಟಿಯಿಂದ ಇನ್ನೇನಾದರೂ ಹೇಳುತ್ತೀರೇನು?

ಡಾಕ್ಟರು ತಲೆಯಾಡಿಸಿದ.

ಏನಾದರೂ ಇದ್ದೀತೆಂದು ನಾನೂ ಭಾವಿಸಲಿಲ್ಲ. ನಾನೊಂದು ತರ್ಕ ಮಾಡಿದ್ದೇನೆ. ಅದರ ವಿಷಯದಲ್ಲಿ ನಿಮ್ಮ ಅಭಿಪ್ರಾಯ ತಿಳಿಯಬೇಕು. ಶೆಣೈಗೆ ಕಾಣುವಂತೆ ನಿಂತು ಹೊಡೆಯಲು ಸಾಧ್ಯವೇ ಎಂಬ ಯೋಚನೆಯಾಗಿದೆ ನನಗೆ. ಪ್ರಾಯಃ ಪೆಟ್ಟು ಬಿದ್ದಾಗ ಆತ ಕುರ್ಚಿಯ ಮೇಲೆ ಕುಳಿತಿರಲಿಲ್ಲವೆಂದೇ ಹೇಳಬಹುದು. ಯಾರೂ ಇಲ್ಲವೆಂದು ಬಾಗಿಲು ಕಡೆಗೆ ಬೆನ್ನು ಮಾಡಿಕೊಂಡಿದ್ದಾಗ ಹಿಂಬದಿಯಿಂದ ಮೇಲೆ ಬಿದ್ದು ಹೊಡೆದು ಅನಂತರ ಕುರ್ಚಿಯ ಮೇಲೆ ಕುಳಿತಿದ್ದಂತೆ ಇಟ್ಟಿರಬೇಕು. ವೈದ್ಯಕೀಯ ದೃಷ್ಟಿಯಿಂದಲೂ ಈ ವಾದ ಸರಿಹೋದೀತಲ್ಲವೆ?"

ಉತ್ತರ ಹೇಳುವ ಮುಂಚೆ ಡಾಕ್ಟರ್ ಮುಖ ಗಂಟಿಕ್ಕಿ ಸ್ವಲ್ಪ ಹೊತ್ತು ತಡೆದು ನುಡಿದ.

"ನಿಮ್ಮ ಭಾವ ನನಗೆ ಹಿಡಿಯಲಿಲ್ಲ. ನಾನೂ ರಂಗಪ್ಪ
ದಾಗ ಇದ್ದಂತೆ ಶರೀರವನ್ನು ಕುರ್ಚಿಯ ಮೇಲಿಡಬಹುದು—
ವಿನ್ನು ಸೆಟೆದಿರಲಿಲ್ಲವಾದ್ದರಿಂದ. ಆದರೆ ರಕ್ತ ಮೇಜಿನ ಮೇ
ಹೊರತು ಕೋಣೆಯಲ್ಲೆಲ್ಲೂ ಇರಲಿಲ್ಲ."

ಆನಂದ ತಲೆಯಾಡಿಸಿದ.

"ಹೌದು, ರಕ್ತ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಈ ಮಾ
ಇಷ್ಟಕ್ಕೆ ಬಿಟ್ಟು ಬಿಡುತ್ತೇನೆ. ವೈದ್ಯಕೀಯವಲ್ಲದ ಒಂದೆರಡು
ಳಿವೆ. ಒಂದು ಸಮಯ ಕೊಲೆಗಡುಕ ಅಡಗಿಕೊಂಡಿದ್ದ— ಅಂದರೆ
ಅಡಗಿಕೊಂಡಿರಬಹುದು— ರೂಮಿನಲ್ಲಾಗಲಿ, ಮನೆಯ ಅ
ದಲ್ಲಾಗಲಿ? ಅಪರಿಚಿತ ಅನ್ನಿ— ಆ ವೇಳೆಗೆ ವ್ಯವಹರಿಸಿದವರ
ಯಾರೂ ಅಲ್ಲವೆನ್ನಿ. ಓಣಿಯಿಂದ ಅಡಿಗೆ ಮನೆಗೆ ಹೋಗುವ ಬ
ವಿಚಾರವಾಗಿ ಇಬ್ಬರು ಮೂವರ ಸಾಕ್ಷ್ಯ ಕೇಳಿದೆ ಎಲ್ಲಾ ಭಿನ್ನವ

"ನಿಮ್ಮ ಅನಂತರ ಬಂದ ಗೋವಿಂದ ರಾಯರು, ಬಾ
ಹಾಕಿತ್ತು, ಖಂಡಿತ ಹಾಕಿತ್ತು, ನಾನು ಚೆನ್ನಾಗಿ ನೋಡಿದೆ, ಎಂ
ಅವರ ಅನಂತರ ಬಂದ ಹನುಮಂತಪ್ಪ "ನನಗೆ ನೆನಪಿಲ್ಲ
ಗಮನಿಸಲಿಲ್ಲ ಅಂದ. ಅದೇ ರಂಗಪ್ಪ, ಡ್ರೈವರ್, "ಬಾಗಿಲು ತೆ
ಇತ್ತು ಬೇಕಾದರೆ ಆಣೆ ಮಾಡಿ ಹೇಳುತ್ತೇನೆ" ಎಂದ. ಬ್ಯಾಂಕ್ ಪು
ಗಳನ್ನು ಸಾಗಿಸುವುದಕ್ಕೆಂದು ಬಂದಾಗ ತೆರೆದ ಬಾಗಿಲೇ ಕ
ಬಿತ್ತಂತೆ. ಹೆಣ ನೋಡಿದ ಮೇಲೆ ಯಾರನ್ನಾದರೂ ಕೂಗಬೇಕ
ಹೊರಕ್ಕೆ ಬಂದಾಗ ತೆರೆದ ಅಡಿಗೆ ಮನೆ ಬಾಗಿಲು ಕಣ್ಣಿಗೆ ಬ
ಹೊರಕ್ಕೆ ಹೋಗುವುದಕ್ಕಿಂತ ಒಳಗೆ ಹೋಗೋಣ ಅನ್ನಿಸಿತ
ಆದ್ದರಿಂದಲೇ ಆತ ಒಳಗೆ ಬಂದು ಕೂಗಿದ್ದು.

"ಈ ಮಧ್ಯೆ ಬಾಗಿಲು ತೆಗೆದವರಾರು? ಹನುಮಂತಪ್ಪ ತೆ
ಬಹುದು'' ಬೇರೆ ಯಾರೋ—ಅಡುಗೆ ಮನೆಯಲ್ಲಿ ಅಡಗಿದ್ದ ಆಗಂ
ನಿರಬಹುದು. ನಿಮ್ಮ ಅನುಭವವೇನು ಡಾಕ್ಟರೆ? ಬಾಗಿಲು
ದಿತ್ತೇ? ಹಾಕಿತ್ತೆ?

"ನನಗೆ ನೆನಪಿರುವ ಮಟ್ಟಿಗೆ ಬಾಗಿಲು ಹಾಕಿತ್ತು— ನಾನು

ಹಡಿ ಮೇಲಕ್ಕೆ ಸಾಗಿದಾಗ ನಾನೇ ಬಾಗಿಲು ಹಾಕಿರಬೇಕು. ಮಹಡಿ ಮೆಟ್ಟಿಲಿಗೆ ಹೋಗಬೇಕಾದರೆ ಅಡುಗೆ ಮನೆಯೊಳಕ್ಕೆ ಹೋಗಲೇ ಬೇಕು ತಾನೆ. ಗೋವಿಂದ ರಾಯರು ಬಂದಾಗ ಬಾಗಿಲು ಹಾಕಿರಬೇಕು. ಸರಿಯಾಗಿ ನೆನಪಿಲ್ಲ. ಎಷ್ಟೋ ದಿನಗಳಾಗಿವೆ ಈಗಾಗಲೇ ಅಲ್ಲದೆ ಈ ಅಂಶಕ್ಕೆ ನಾನಷ್ಟು ಗಮನವಿತ್ತಿರಲಿಲ್ಲ''.

ಆನಂದನ ಮುಖದಲ್ಲಿ ಅತೃಪ್ತಿ ಕಾಣಿಸಿಕೊಂಡಿತು. ''ನಿಮಗೆ ನೆನಪಿರಬೇಕೆಂದು ನಾನೂ ಭಾವಿಸುವುದಿಲ್ಲ. ಆದರೆ ನಾಗಣ್ಣನೊಂದಿಗೆ ಮೇಲೆ ಮಾತನಾಡುತ್ತಿದ್ದಾಗ ಕೆಳಗಿನಿಂದ ಏನಾದರೂ ಶಬ್ದ ಕೇಳಿಸಿತೆ-ನಿಮ್ಮಿಬ್ಬರಿಗೂ ಕೇಳಿಸಿತು ಅಂದಿರಲ್ಲ. ಆ ಶಬ್ದಕ್ಕೆ ಮುಂಚೆ?''

"ಇಲ್ಲ, ಅಥವಾ ಕೇಳಿಸಿದ್ದರೂ ಕೇಳಿಸಿರಬಹುದು; ನಮ್ಮ ನಿಗಾ ಹರಿಯಲಿಲ್ಲ ಅತ್ತ. ಆದರೆ ಕೇಳಿಸಿದ ಶಬ್ದ ಸ್ಪಷ್ಟವಾಗಿಯೇ ಕೇಳಿಸಿತು"

"ಎಂತಹ ಶಬ್ದ ಅದು?"

ಡಾಕ್ಟರು ತಲೆಯಾಡಿಸಿದ. ''ಇಂತಹದೆಂದೇ ಹೇಳಲಾರೆ. ಬಾಗಿಲು ಹಾಕಿದ ಶಬ್ದವೆಂದ ನಾಗಣ್ಣ. ನನಗೆ ಇನ್ನೂ ಸೂಕ್ಷ್ಮ ಶಬ್ದದಂತೆ ಭಾಸವಾಯಿತು. ಶೆಣೈ ಶರೀರ ಮೇಜಿನ ಮೇಲಕ್ಕೆ ಉರುಳಿದ ಶಬ್ದವಿರಬಹುದೋ ಏನೋ, ಅಂತೂ ವಿಚಿತ್ರ"

''ಅವನ ಶರೀರ ಮೇಜಿನ ಮೇಲಕ್ಕೆ ಉರುಳಿರಲಿಲ್ಲವಲ್ಲ ಡಾಕ್ಟರೆ ಹಾಗೆ ಕುರ್ಚಿಯ ಮೇಲೆ ಸರಿದಿತ್ತು—ಮೇಜಿಲ್ಲದಿದ್ದರೆ ನೆಲಕ್ಕೆ ಉರುಳುತ್ತಿತ್ತು.''

''ಹೌದು, ಹೌದು, ಏನೋ ನನಗಂತೂ ಗೊತ್ತಾಗುವಂತಿಲ್ಲ. ಈ ಅಂಶದಲ್ಲಿ ನಿಮಗೆ ನೆರವಾಗಲಾರೆ''.

ಆನಂದ ತನ್ನ ಕೈಪುಸ್ತಕ ತೆಗೆದು ಕೆಲ ಹಾಳೆ ಮಗುಚಿದ. ಮತ್ತೆ ಅವನು ಮಾತನಾಡಿದಾಗ ಧ್ವನಿಯಲ್ಲಿ ನಸು ದರ್ಪ ಬೆರೆತ್ತಿತ್ತು.

''ಇಂತಹ ಕೇಸಿನಲ್ಲಿ ಎಲ್ಲಾ ಸಂದರ್ಭಗಳನ್ನೂ ನಾವು ಗುಣಿಸಬೇಕಾಗುತ್ತದೆ. ಶೆಣೈ ಮರಣಕ್ಕೆ ಸ್ವಲ್ಪ ಹೊತ್ತಿಗೆ ಮುಂಚೆ ಮೂರು ಮಂದಿ ಗಿರಾಕಿಗಳು ಬಂದುಹೋದರು. ಒಬ್ಬರು ನೀವು, ಮತ್ತೊಬ್ಬರು ಗೋವಿಂದರಾವ್, ಇನ್ನೊಬ್ಬ ಹನುಮಂತಪ್ಪ. ನಾನು ಕೆಲ ವೈಯ್ಯ

ಕ್ತಿಕ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಮೊದಲು ನಿಮ್ಮ ವಿ
ಕುದುರೆ ಜೂಜಿನಿಂದಾಗಿ ಆಗಾಗ್ಗೆ ನಿಮಗೆ ಆರ್ಥಿಕ ಮುಗ್ಗಟ್ಟು
ವಾಗುತ್ತಿರುತ್ತದೆ ಎಂಬ ಅಂಶ ನನಗೆ ಗೊತ್ತಿದೆ ಎಂಬುದನ್ನು ನಿವಿ
ಮುಚ್ಚಿಡುವುದಿಲ್ಲ. ನಿಮ್ಮ ಬುಕ್‌ಮೇಕರ್ ಖಾನ್ ಆಲಿ ಎಂಬು
ಹನುಮಂತಪ್ಪನಿಂದ ಪತ್ತೆಹಚ್ಚಿದೆ. ನಗರದಲ್ಲಿ ಅವನನ್ನು ಕಂ
ಆವನು ಹೇಳಿದ.........”

ಡಾಕ್ಟರು ತನ್ನ ಕುರ್ಚಿಯನ್ನು ಹಿಂದಕ್ಕೆ ತಳ್ಳಿದರು. ಮು
ಕೋಪಾನಲ ಕಾಣಿಸಿಕೊಂಡಿತು. “ಖಾನಾಲಿ ನನ್ನ ವಿ
ಹೇಳುವುದಕ್ಕೆ ಅವನಿಗೇನಿದೆ ಹಕ್ಕು? ಜೂಜು ವ್ಯವಹಾರ
ವಾಪದ್ದು. ಅದರ ಮೇಲೆ ತೆರಿಗೆ ಕೂಡ ಕೊಡುತ್ತೇವೆ. ಅಂದ
ನಿಮಗೆ ಅದರಲ್ಲಿ ಬಾಯಿಹಾಕುವುದಕ್ಕೆ ಅಧಿಕಾರವಿಲ್ಲ!”

“ಆಗಲೇ ಹೇಳಿದೆನಲ್ಲ ಡಾಕ್ಟರೆ” ಎಂಬುದಾಗಿ ಆನಂದ
ಧಾನದಿಂದ ಮಾತು ಮುಂದುವರಿಸಿದ “ಖಾನಾಲಿಗೆ ನೀವು
೨೦೦೦ ಕೊಡಬೇಕೆಂದು ಅವನೇ ಹೇಳಿದ—ಬರುವ ಸೋಮವಾ
ಬಾಕಿ ಪಾವತಿಗೆ ಕಡೆ ದಿನವೆಂದೂ ಆ ದಿನ ಕೊಡದಿದ್ದರೆ ಕೋ
ಹೋಗುವುದಾಗಿಯೂ ನಿಮಗೆ ಎಚ್ಚರಿಕೆ ಕೊಟ್ಟಿದ್ದನಂತೆ—ಕೋ
ಹೋದರೆ ನಿಮಗೆ ಅವಮಾನವಾಗುವುದೆಂದು ನೀವು ಹೇಳಿದ್ದಿರಂತೆ.

ಇಷ್ಟು ಮಾತನಾಡಿ ಆನಂದ ಡಾಕ್ಟರನ್ನು ದೃಷ್ಟಿಸಿದ; ಅ
ಮುಖ ಹೆಪ್ಪುಗಟ್ಟಿತ್ತು, ಶರೀರ ಕಲ್ಲುಪ್ರತಿಮೆಯಂತೆ ಅಲುಗಾಡದಿ

“ಶನಿವಾರ ಅಂದರೆ ಕೊಲೆಯಾದ ಎರಡು ದಿನದ ಪ
ಖಾನಾಲಿಗೆ ಪೂರಾ ಮೊಬಲಗು ಪಾವತಿಯಾಯ್ತು; ಚೆಕ್ ಮೂ
ವಾಗಿಯಲ್ಲ, ನಗದು ೧೦೦೦ರೂ. ೧೦೦ ರೂ.ಗಳ ನೋಟಿನಲ್ಲಿ,
ದದ್ದು ೫, ೧೦ ರೂ.ಗಳ ನೋಟಿನಲ್ಲಿ. ಈ ಎಲ್ಲಾ ನೋಟುಗಳ
ನೋಡಲಾಗಲಿಲ್ಲ. ೧೦೦ ರೂ.ನ ಒಂದು ನೋಟು ನೀವು ೫
ನೋಟುಗಳನ್ನು ಕೊಟ್ಟು ಸೊಸೈಟಿಯಿಂದ ಪಡೆದದ್ದು. ಇನ್ನೊಂ
ಹಾಗೆ ಕೃಷ್ಣ ಭವನದಿಂದ ಪಡೆದದ್ದು. ಇಷ್ಟೊಂದು ದುಡ್ಡು ನಿಮ್ಮ

ಹೇಗೆ ಬಂತು ಹೇಳುವಿರಾ? ಖಾನಾಲಿಗೆ ಚೆಕ್ ಮೂಲಕ ಹಣ ಏಕೆ ಪಾವತಿ ಮಾಡಲಿಲ್ಲವೆಂಬುದನ್ನೂ ತಿಳಿಸುವಿರಾ?

"ಹೇಳುವುದಿಲ್ಲ ನೀವು ಯಾಕೋ ನನ್ನನ್ನೆ ಬೆದರಿಸುತ್ತಿರುವಂತಿದೆ" ಡಾಕ್ಟರ್ ಧ್ವನಿ ಗಡುಸಾಗಿತ್ತು.

"ನೀವು ವಿವರಿಸಲೇ ಬೇಕಾದ ಅಂಶವನ್ನು ವಿವರಿಸುವುದಕ್ಕಾಗಿ ನಿಮಗೆ ಇನ್ನೊಂದು ಅವಕಾಶ ಕೊಡುತ್ತೇನೆ. ಆದರೆ ಒತ್ತಾಯ ಮಾಡುವುದಿಲ್ಲ ಇನ್ನೊಂದು ಸಂಗತಿಯಿದೆ. ಕತ್ತುಕೊಯ್ದ ಚಾಕುವಿನ ಮೇಲೆ ಬೆರಳ ಗುರುತುಗಳಿರಲಿಲ್ಲವೆಂಬ ಅಂಶ ಈ ಮೊದಲೇ ಹೊರಪಟ್ಟಿದೆಯೆಂಬುದು ನಿಮಗೂ ಗೊತ್ತೇ ಇದೆ. ಒಂದೆಡೆ ಹೊರತು ಇನ್ನೆಲ್ಲೂ ಉಪಯುಕ್ತವೆನಿಸಬಹುದಾದ ಬೆರಳ ಗುರುತು ಸಿಗಲಿಲ್ಲ ಓಣಿಯಿಂದ ಅಡುಗೆ ಮನೆಗೆ ಹೋಗುವ ಬಾಗಿಲು—ನಾವು ತರ್ಕಿಸಿದ ಬಾಗಿಲು—ಅದರ ಒಳ ಹಿಡಿಯ ಮೇಲೆ ಮೂರು ಅಪರೂಪದ ವಿಚಿತ್ರ ಬೆರಳು ಗುರುತುಗಳಿದ್ದವು.

"ಕೊಲೆಪಾತಕಿ ಈ ಬಾಗಿಲ ಹಿಂದೆ ಅಡಗಿ, ಕಟ್ಟಕಡೆಯ ಗಿರಾಕಿ ಹೋದ ನಂತರ ಬ್ಯಾಂಕಿನೊಳಕ್ಕೆ ನುಗ್ಗೋಣವೆಂದು ಸಿದ್ಧವಾಗಿ ನಿಂತಿದ್ದನೆಂದು ನನ್ನ ಊಹೆ. ಶೆಣ್ಯೆಗೆ ಪೆಟ್ಟು ಹಾಕಬಹುದಾದಷ್ಟು ಹತ್ತಿರಕ್ಕೆ ಹೀಗೆ ಹೋದನೆಂದರೆ, ಬ್ಯಾಂಕ್ ಮ್ಯಾನೇಜರ್ ಹೇಳಿದಂತೆ ಆತ ನಂಬುಗೆಗೆ ಅರ್ಹನಾದ ಪರಿಚಿತನೆಂದೇ ಹೇಳಬೇಕಾಗುವುದು. ಆ ರೀತಿ ವಿಶ್ವಾಸ ಪಡೆದಿದ್ದ ಗಿರಾಕಿ ನೀವೇ ಡಾಕ್ಟರ್ ಶ್ರೀಧರ್. ನಿಮ್ಮ ವ್ಯವಹಾರ ಮುಗಿಸಿಕೊಂಡ ಮೇಲೆ ನಾಗಣ್ಣನೆಡೆಗೆ ಸೀದಾ ಹೋದೆ ಎಂದು ನೀವೇ ಹೇಳಿದಿರಿ. ಆದರೆ ಮುಚ್ಚಿದ ಬಾಗಿಲ ಹಿಂದೆ ಅಡುಗೆ ಮನೆಯಲ್ಲಿ ನೀವೇ ಹೇಳಿದ್ದೀರಿ. ಆದರೆ ಮುಚ್ಚಿದ ಬಾಗಿಲ ಹಿಂದೆ ಅಡುಗೆ ಮನೆಯಲ್ಲಿ ನೀವೇ ಅಡಗಿ ನಿಂತಿರಬಹುದು."

ಆನಂದ ಮಾತು ನಿಲ್ಲಿಸಿದ. ಡಾಕ್ಟರ್ ಅದನ್ನು ಗಮನಿಸಲಿಲ್ಲ. ಅವನ ಕಣ್ಣುಗಳಲ್ಲಿ ಭೀತಿ ತುಂಬಿತ್ತು; ದೃಷ್ಟಿ ಗೋಡೆಯನ್ನೇ ನೋಡುತ್ತಿತ್ತು. ಕೈಗಳೆರಡು ಕುರ್ಚಿ ತೋಳುಗಳನ್ನು ಬಿಗಿಯಾಗಿ ಹಿಡಿದಿದ್ದುವು.

ಆನಂದ ಮುಂದುವರಿಸಿದ "ಬಾಗಿಲ ಒಳ ಹಿಡಿಯ ಮೇಲೆ

ಮೂರು ಬೆರಳ ಗುರುತುಗಳಿದ್ದವೆಂದೆನಲ್ಲ—ಕೊಲೆಗಡುಕ, ಚಾ
ಹಿಡಿಯ ಮೇಲಿದ್ದ ಗುರುತುಗಳನ್ನು ಅಳಿಸಿದವನು ಇವುಗಳನ್ನು
ಸುವುದಕ್ಕೆ ಮರೆತ. ಈ ಗುರುತುಗಳು ಸಾಮಾನ್ಯ ಗುರುತುಗ
ರಬ್ಬರ್ ಗ್ಲೋವ್ ಧರಿಸಿದ ಬೆರಳುಗಳ ಗುರುತು. ದಾದಿಯೋ ಡಾ
ಧರಿಸುವ ಗ್ಲೋವ್‌ನದು. ಗುರುತು ಬೀಳುವುದಿಲ್ಲವೆಂದು ಕೊಲೆ
ಭಾವಿಸಿದ್ದ. ಡಾಕ್ಟರೆ ನಿಮ್ಮ ಪಕ್ಕದಲ್ಲಿ ನಿಮ್ಮ ಜೊತೆ ನಿಮ್ಮ ಉದ
ಕ್ಕಾಗಿ ನೀವು ಕೊಂಡೊಯ್ಯುವ ಚೀಲವಿದೆ. ಅದನ್ನು ತೆಗೆದು ತೋ
ವಿರಾ? ನಾನು ಹೇಳಿದಂತಹ ಕೈಚೀಲ ಅದರಲ್ಲಿದೆಯೆ?”

ಡಾಕ್ಟರು ಮುಳುಗಿಹೋಗಿದ್ದ ಸ್ವಪ್ನ ಸಮಾಧಿಯಿಂದ
ಸ್ವಲ್ಪವಾಗಿ ಎಚ್ಚೆತ್ತ. ತನ್ನನ್ನು ಹಿಂಸಿಸುತ್ತಿದ್ದಾತನೆಡೆಗೆ ಕೈ
ತಳ್ಳಿದ; ಅವನ ಕೈಗಳು ಕೋಟಿನ ಒಳಜೇಬಿನೊಳಕ್ಕೆ ನುಗ್ಗಿ
ಮಾತ್ರೆಯೊಂದನ್ನು ತೆಗೆದವು. ಕಣ್ಣು ಬಿಡುವುದರೊಳಗೆ
ಉದರ ಸೇರಿತ್ತು; ಡಾಕ್ಟರನ್ನು ದೀರ್ಘನಿದ್ರೆಗೆ ಅಣಿಮಾಡಲು!

(ಇಂಗ್ಲಿಷ್ ಕಥೆಯೊಂದರಾಧಾರ

ಶುದ್ಧ ಕಳ್ಳರು

೨

"ಲೋ! ನಾಗ, ಈಗಲಾದರೂ ಮೆದುಳು ಕೆರೆದು ಒಂದಿಷ್ಟು ದುಡ್ಡು ಮಾಡಬೇಕು—ಇಲ್ಲದಿದ್ದರೆ ನಮ್ಮ ಗತಿ ಅಧೋ ಗತಿಯೇ! "ಹೂ ಊ ಊ" ಸ್ವರ ಹೊರಟಿತು.

ಮುರುಕು ಮನೆಯ ಕೋಣೆಯೊಂದರಲ್ಲಿ ಇಬ್ಬರು ಯುವಕರು ಪೆಚ್ಚು ಮುಖ ಹಾಕಿಕೊಂಡು ಕುಳಿತಿದ್ದರು. ತಿಂಡಿ ತಿಂದ ತಟ್ಟೆಗಳೂ, ಕಾಫೀ ಲೋಟಗಳು ಮೇಜಿನ ಮೇಲೆ ಹರಡಿದ್ದವು. ಬೀಡಿ ಹೊಗೆ ರೂಮು ತುಂಬಿತ್ತು. ಮೊದಲು ಮಾತನಾಡಿದವನು ಎತ್ತರದ ಆಳು, ಅಗಲವಾದ ಎದೆ ಭುಜ, ಲಕ್ಷಣವಾದ ಮೈಕಟ್ಟು ತುಂಬಿದ ಮುಖ; ಅವನ ಹೆಸರು ಭೀಮರಾವ್; ಈ ಹೆಸರು ಅವನ ನಿಜನಾಮಧೇಯವೇ ಆಗಿದ್ದರೂ, ಬಹು ಜನ ಅವನನ್ನು ಈ ಹೆಸರಿನಿಂದ ಗುರುತಿಸಲು ಸಾಧ್ಯವಿಲ್ಲ.

"ಹೇಳೋದು ಸುಲಭ ಮಾಡೋದು ಕಷ್ಟ. ಈ ಪತ್ರಿಕೇಲಿ, ಏನೂ ಸುದ್ದಿಯಿಲ್ಲ "ಆಫ್ರಿಕದಲ್ಲಿ ದಾಂಧಳೆ" 'ಮರ್ಚೆಂಟನ ಸೆಂಚೂರಿ 'ಅನಾಥ ಸಂರಕ್ಷಣಾಲಯ' 'ತಾಲೂಕು ಕಾಂಗ್ರೆಸ್ ಅಧ್ಯಕ್ಷರ ಆರೋಗ್ಯ ಉತ್ತಮವಾಗಿದೆ'—ಇಂತಹ ಸತ್ತ ಸುದ್ದಿಗಳಿಂದ ಯಾವ ಮೂರ್ಖನಿಗೆ ತಾನೆ ಬುದ್ಧಿ ಚುರುಕಾದೀತು? ಎಲ್ಲಿ ಆ "ಪ್ರಜಾಯುಕ್ತಿ"ಯಲ್ಲೇನಿದೆ ವಿಶೇಷ?"

ನಾಗರಾಜ ಆ ಒಂದಾಣೆ ಪತ್ರಿಕೆಯನ್ನು ಭೀಮರಾವ್ ಕಡೆಗೆ ಸೆದು ಕಾಲು ನೀಡಿದ. ಮೈಕಟ್ಟಿನಲ್ಲಿ ಎತ್ತರದಲ್ಲಿ ನಾಗರಾಜ ತನ್ನ ಸ್ನೇಹಿತನಿಗಿಂತ ಚಿಕ್ಕವನು. ಮುಖ ಸ್ವಚ್ಛ; ಹಟವಾದಿಯಂತೆ ತೋರುವ ದಪ್ಪ ಕೆನ್ನೆಗಳು.

"ಚಿಕ್ಕ ಹುಡುಗಿ ಸುಲೋಚನೆಯ ನೆನಪಿದೆಯೋ—ಆ ಪುಟ್ಟ ಸುಂದರಿ? ಅವಳಿಂದು ಗಾಜಿನ ಕಾರ್ಖಾನೆ ಶಂಕರರಾಯನ ಹೆಂಡತಿ.

ಶ್ರೀಮಂತೆ ದುಡ್ಡು-ಮಹಿಳಾ ಸಮಾಜ-ಕಲಿತ ಹೆಣ್ಣಳ ಸ
ದೊರೆತು ದೊಡ್ಡ ಕಲಾವಿದೆ ಅನ್ನಿಸಿಕೊಳ್ಳಬೇಕೆಂಬ ಹಂಬ
ತೊಳಲಿ ಬಳಲುತ್ತಿದ್ದಾಳೆ- ಸಣ್ಣ ಹುಡುಗೆಯರ ಕೈಲಿ ನಾಟಕ
ಕುಣಿಸಿ ಈಗ ತಾನೇ ಪಾತ್ರವಹಿಸಲಾರಂಭಿಸಿದ್ದಾಳೆ. ಗಂಡು ಸ
ತನ್ನ ಹೆಂಗಳೆಯರ ಗ್ಯಾಂಗಿನೊಳಕ್ಕೆ ತುಂಬಿಕೊಂಡಿದ್ದಾಳೆ.
ಆಸ್ಪತ್ರೆ" ಸಹಾಯಾರ್ಥ ಅಂತ ತನ್ನ ಮನೆ ಮುಂಭಾಗದ ಹಾ
ನಿತ್ಯ ನಾಟಕ ಆಡಿಸುತ್ತಿದ್ದಾಳೆ. ಹಾಲು ಯಾತಕ್ಕೋ ಮನೆ
ರಸ್ತೆ ಬಳಿ ನಿರ್ಮಿತವಾದ್ದು............

‹ ಒಳ್ಳೆ ಸಂಗತಿ ಹೇಳಿದೆ ಇದೇ ಬೇಕಾದ್ದು?" ಭೀಮರ
ತನ್ನ ಸ್ನೇಹಿತನ ಸವಿಯಾಲಾಪ ಬೇಕಾಗಿರಲಿಲ್ಲ. "ಕಂಡವರ
ಶ್ರೀಮಂತ ಕನ್ಯೆ?—ಸಹಾಯಾರ್ಥಕ್ಕೆಂದು ಕುಣಿಯುತಿದ್ದಾಳೆ?"

"ಹೂ, ಹೌದು..........ಒಂದು ವಾರವಾಯಿತು. ಹ
ಯುವರ ಎರಡು ಹಾಸಿಗೆ" ಎಂಬ ನಾಟಕ ಪ್ರದರ್ಶನ ನಿತ್ಯದ
ಗಿದೆ. ಸುಲೋಚನೆಯೇ ನಾಟಕದ ನಾಯಕಿ—ನೃತ್ಯದ ದೃಶ್ಯದ
ಕುಟುಂಬದ ಸುಪ್ರಸಿದ್ಧ ಪದಕದ ಹಾರ ಹಾಕಿಕೊಂಡು ಬರುತ್ತಾ
ಆದರೆ ಅವಳ ಸೌಂದರ್ಯವನ್ನು ಕಣ್ತುಂಬ ಕಾಣಬೇಕೆನ್ನು
ಕಟ್ಟಕಡೆಯ ಮಲಗುಮನೆ ದೃಶ್ಯವೇ ಸರಿ......ಅವಳು......".

"ಅದೇ ಮುಕ್ಕಾಲು ಬತ್ತಲೆ ಕಾಣಿಸಿಕೊಳ್ಳುವ ದೃಶ್ಯ—ಅ
ಮೈನವಿರು—ರೋಮಾಂಚನ—ನೋಡುಬೇಕು—ಸ್ವಾರಸ್ಯ ನು..
ನಾಗರಾಜನ ಕಣ್ಣುಗಳಲ್ಲಿ ತೀವ್ರಾಸಕ್ತಿ ಮಿಂಚಿತು.

ಪತ್ರಿಕಾ ವರದಿಯನ್ನು ಆಮೂಲಾಗ್ರವಾಗಿ ಪರಿಶೀಲಿ
ಭೀಮರಾಯ ತನ್ನ ಗೆಳೆಯನ ಮರುಳು ಮಾತುಗಳಿಗೆ ಗಮನಕ್ಕೆ
"ಬೇಕಾದ ವಿಷಯದ ಕೋಟೆಯೇ ನಿನ್ನ ಕೈಗೆ ಸಿಕ್ಕಿದೆ ಹಾದ
ಹಾಕೋಣ" ಎಂದ.

ನಾಗರಾಜ ಭೀಮರಾಯನನ್ನು ದಿಟ್ಟಿಸಿದ "ಏನು ಸುಲೋ
ಯನ್ನು ನೋಡೋಣವೇ? ಓಹೋ! ಹೋಗೋಣ—ಸಾರ್ಥಕ ಕ
ಹೋಗೋಣ" ಎನ್ನುತ್ತ ಖುಷಿಯಿಂದ ಕುಣಿದಾಡಿದ.

ಭೀಮರಾಯ ನಾಗರಾಜನ ಕಡೆ ಮೂದಲಿಕೆಯ ದೃಷ್ಟಿ ಬೀರಿ ವ್ಯಂಗ್ಯ ನಗೆನಕ್ಕು 'ಮಂಕೆ—ಸದಾ ನಿನ್ನ ತಲೆಯಲ್ಲಿರುವುದು ಒಂದೇ ವಿಷಯ—ಹೆಂಗಸನ್ನಲ್ಲ ನೀನು ನೋಡಬೇಕೆನ್ನುತ್ತಿರುವುದು, ಅವಳ ಕೊರಳೊಳಗಿರುವ ಪದಕವನ್ನು".

000

ನಾಗರಾಜ ಪತ್ರಿಕೆಯಲ್ಲಿದ್ದ ರೇಸಿಂಗ್ ಟಿಪ್ಸ್‌ಗಳನ್ನೊ ಪರಿಶೀಲಿಸುತ್ತಿದ್ದ; ಭಿಮರಾಯ ಸಿಗರೇಟು ಹಚ್ಚಿ ಚಿಂತಾಮಗ್ನನಾದ. ಒಂದರ್ಧ ಗಂಟೆ ಹಾಗೆ ಸಂದಿತು—ಇದ್ದಕ್ಕಿದಂತೆ ಭೀಮ ನಾಗರಾಜನಿಂದ ಪತ್ರಿಕೆಯನ್ನು ಕಿತ್ತುಕೊಂಡ. "ನಾಟಕದ ಪಾತ್ರಧಾರಿಗಳಾರು?—ಆಚಾರಿ. ನರಸಿಂಹರಾವ್—ನರಸಿಂಹರಾವ್ ಯಾರು? ಯಾರೋ?—ಖಳನಾಯಕ—ದೇಸಾಯಿ—ಇವನೇ ಸುಲೋಚನೆಯೊಂದಿಗೆ ಮಲಗುಮನೆಯ ದೃಶ್ಯದಲ್ಲಿ ಭಾಗವಯಿಸುವವನು—ಸರಿ ಉಳಿದ ಪಾತ್ರಗಳಲ್ಲೊ ಶ್ರೀಮಂತರೇ—ನಮ್ಮಂತಹ ಬಡಪಾಯಿಗಳು ಯಾರೂ ಇಲ್ಲ."

"ಅಲ್ಲಿ ಗಿಟ್ಟಿಸುವುದಕ್ಕೆ ಪ್ರಯತ್ನ ಮಾಡಿದರೆ ಫಲವಿಲ್ಲ—ಸುಲೋಚನೆಯದು ಶ್ರಮಸಾಧ್ಯ ಪಾತ್ರವೇನೂ ಅಲ್ಲ".

"ಇರಲಿ ನಿನ್ನ ಮಾತು. ನನ್ನ ಜೊತೆಗೆ ಹೆಗಲುಕೊಡು, ಕೈಗೆ ಕೈಕೊಡಿಸು—ಎದೆಯ ಮೇಲಿನ ಪದಕ ಹಾರಿಸಿಯೆ ಬಿಡುತ್ತೇನೆ. ಸಾಧ್ಯವಿಲ್ಲವೆನ್ನುತ್ತೀಯ? ಆ ನಾಟಕದಲ್ಲಿ ಅಭಿನಯಿಸುವುದಕ್ಕೆ ಅವಕಾಶ ಸಿಗಲಿ ನೋಡುವಿಯಂತೆ!"

"ಪಾತ್ರಧಾರಿಗಳ ಪೈಕಿ ಒಬ್ಬನಿಗೆ ವಿಷ ಹಾಕು; ಅವನ ಸ್ಥಾನ ಆಕ್ರಮಿಸು" ಬೇಸರದಿಂದ ನುಡಿದ ನಾಗರಾಜ.

"ಬೆಪ್ಪೆ ಕೇಳಿಲ್ಲಿ—ದೇಸಾಯಿ, ಅನಂತದೇಸಾಯಿ ಕೋಣೇ ಹಾಳು ರಾಜೇಂದ್ರ ದೇಸಾಯಿ ಜ್ಯೇಷ್ಠ ಪುತ್ರ—ಚಂದ್ರವದನ ಕಾಣಿಕ್ಯಂ ಮಗಳು ಹತ್ತುಕಡೆ ಹಾರಾಡೋ ಪತಂಗ, ರಾಜಶೇಖರ ಸೈನ್ಯದಲ್ಲಿದ್ದಾನೆ. ಲೆಖ್ಖಾಚಾರ ಸರಿಹೋಯ್ತು. ಅವರ ಮನೆಗೆ ಸಮೀಪದಲ್ಲೆ "ಆರೋಗ್ಯ ಭವನ" ಹೋಟೇಲಿದೆ—ಆದರೆ ನಾನು ಬಹಳ ಎಚ್ಚರಿಕೆಯಿಂದ ಹೆಜ್ಜೆ

ಹಾಕಬೇಕು, ನುಗ್ಗಬೇಕು ಗಾಳದಲ್ಲಿ ಸಿಕ್ಕಿದ್ದನ್ನ ಹಗುರಾಗಿ
ಕೊಳ್ಳಬೇಕು – ಅಂತು ಸುಗ್ಗಿ ಬಂದಿದೆ ಅನ್ನು''.

೦೦೦

ವಿನೋದಾತ್ಮಕ "ಎರಡು ಹಾಸಿಗೆ" ನಾಟಕವನ್ನೂ ಪ್ರ
ಪ್ರದರ್ಶಿಸುತ್ತಿದ್ದರು; ವಾರದಲ್ಲಿ ನಾಲ್ಕುದಿನ ರಾತ್ರಿ ಪ್ರದರ್ಶನದ ಜ
ಹಗಲು ಪ್ರದರ್ಶನವೂ ಇತ್ತು. ಎಲ್ಲ ಪ್ರದರ್ಶನಗಳ ಉತ್ಪತ್ತಿಯೂ
ಆಸ್ಪತ್ರೆ ಸಹಾಯಾರ್ಥ. ಇಷ್ಟೊಂದು ಪ್ರದರ್ಶನಗಳಲ್ಲಿ ಪಾತ್ರ
ಸುತ್ತಿದ್ದರೂ ಸುಲೋಚನೆ ಮಾತ್ರ ಹರ್ಷಚಿತ್ತಳಾಗಿಯೇ ಇರುತ್ತಿ
ಅವಳಿಗೆ ಈ ನಾಟಕದ ನಾಯಕಿ ಪಾತ್ರವೆಂದರೆ ತುಂಬಾ ಆಸೆ.
ರಲ್ಲೂ ಅನುರೂಪನಾದ ನಟ ಖಳನಾಯಕನ ಪಾತ್ರಕ್ಕೆ ದೊರೆತಿ
ರಿಂದ ಅವನ ಜೊತೆ ನಟಿಸುವುದು ಅವಳಿಗೆ ವಿಹಾರದಂತೆ ಅನ್ನಿಸುತ್ತಿ
ನಾಟಕ, ಶ್ರಮಪೂರ್ಣ ಕೆಲಸ ಎನಿಸದೆ ಸಂತೋಷ ಕೂಟವೆಂದೇ ಅ
ಭಾಸವಾಗುತ್ತಿತ್ತು. ಆದರಿಂದ ನಾಟಕದಲ್ಲಿ ಭಾಗವಹಿಸುತ್ತಿದ್ದವ
ಅವಳೇ ಇಂದ್ರಭೋಗಸಮಾನ. ಆದರಾತಿಥ್ಯಗಳ ವ್ಯವಸ್ಥೆ ಮಾಡಿ

ಮಂಗಳವಾರದ ಮಧ್ಯಾಹ್ನದ ಪ್ರದರ್ಶನ ಅರ್ಧಸಾಗಿರು
ಆ ಶ್ರದ್ಧಾಳು ಗುಂಪಿಗೆ ಸಿಡಿಲೆರಗಿತು: ಅನಂತ ದೇಸಾಯಿಗೊ
ತಂತಿ." ಅನಂತ ದೇಸಾಯಿ, ವಿಲಾಸೀ ರಂಗಭೂಮಿ, ಶ್ರೀ
ದೇಸಾಯರ ಸ್ಥಿತಿ ಕ್ರೂರವಾಗಿದೆ. ಇಂದೇ ಹೊರಟು ಬರಬೇಕ
ಆಗತ್ಯ—ಸುಂದರೀ ಕಾಂತ, ಕೋಣೆ ಹಾಳು".

ವ್ಯಸನದಿಂದ ಬಿಳುಚಿದ ಮುಖದೊಡನೆ ಅನಂತ ದೇಸಾಯಿ
ಯನ್ನು ತೆಗೆದುಕೊಂಡು ಸುಲೋಚನೆಯ ಬಳಿ ಹೋದ.

'ನನಗೆ ಏನೂ ತೋಚದಾಗಿದೆ, ಹೋಗಲೇ ಬೇಕು' ಎ
ನುಡಿದ.

"ಹೋಗಬೇಕು? ಹೊಗಲಿ? ಹೋಗಿ ನಾಟಕ ಕೆಡುಸುವಿರಾ

"ಎಲ್ಲಾ ಪಾತ್ರಗಳಿಗೂ ಬದಲಿ ನಟರನ್ನೂ ತರಬೇತು ಮಾ
ಬೇಕೆಂದು ಮುಂಚಿನಿಂದ ಹೇಳುತ್ತ ಬರಲಿಲ್ಲವೇ" ಎಂದು ಕುತೂ
ದಿಂದ ಗೊಣಗಿದ ನಾಟಕ ನಿರ್ದೇಶಕ ನಾರಾಯಣರಾಯ.

"ನನ್ನ ಮನಸ್ಸಿಗೂ ಒಗ್ಗದು—ಆದರೇನು ಮಾಡಲಿ? ಸ್ಥಿತಿ ವಿಷಮಿಸಿರುವಂತಿದೆ. ಅಲ್ಲವೆ?"

"ಯಾರು ತಂತಿ ಕಳಿಸಿದವರು? ಈ ಸುಂದರೀಕಾಂತ ಯಾರು?"

ಅನಂತ ದೇಸಾಯಿ ಮುಗುಳ್ನಗೆ ಬೀರಿದ "ಯಾರೋ ಏನೋ—ಗುಮಾಸ್ತೆಯೋ ಗಿಮಾಸ್ತೆಯೋ ಇರಬೇಕು. ನಾನು ಈ ಮುಂಚೆಯೇ ಹೋಗಬೇಕಿತ್ತು. ನಿಮ್ಮನ್ನು ಅನಾನುಕೂಲಪಡಿಸಬಾರದೆಂದು ಸುಮ್ಮನಿದ್ದೆ".

"ಅನಾನುಕೂಲವಷ್ಟೇ ಅಲ್ಲ, ಪಾತಾಳಕ್ಕೂ ತುಳಿಯುತ್ತಿದ್ದೀರಲ್ಲ ಈಗ".

"ಮೂರನೆ ಅಂಕಕ್ಕೆ ಸಿದ್ಧವಾಗಿ ಸುಲೋಚನ." ನಾರಾಯಣರಾಯರು ಒತ್ತಾಯ ಧ್ವನಿಯಲ್ಲಿ ನುಡಿದು ಮುಂದುವರಿದು "ದೇಸಾಯರ ಹತ್ತಿರ ನಾನು ಮಾತನಾಡುತ್ತೇನೆ. ಅವರ ಪಾತ್ರ ಬರುವುದಕ್ಕೆ ಇನ್ನೂ ಬಹಳ ಹೊತ್ತಿದೆ" ಎಂದರು.

ಸುವಿಖ್ಯಾತ "ಮಲಗುಮನೆ"ಯ ದೃಶ್ಯದಲ್ಲಿ ಪಾತ್ರವಹಿಸುವುದಕ್ಕಾಗಿ ಸಜ್ಜಾಗಲು ಸುಲೋಚನೆ ಗಂಭೀರವಾಗಿ ಸಜ್ಜು ಕೋಣೆಯ ಕಡೆಗೆ ಹೆಜ್ಜೆಯಿಟ್ಟಳು. ರಂಗಭೂಮಿಯ ಪ್ರೇಮಿ ಈ ರೀತಿ ನಡುನೀರಿನಲ್ಲಿ ಕೈಬಿಟ್ಟದ್ದರಿಂದ, ಅವಳಿಗೆ ಇಂದು ಎಂದಿನ ಉತ್ಸಾಹೋನ್ಮಾದವಿರಲಿಲ್ಲ. ಈ ಅಂಕದ ಆರಂಭದಲ್ಲಿ ದೇಸಾಯಿಗೆ ಪಾತ್ರವಿಲ್ಲದ್ದರಿಂದ ಆತ ಬೇರೆಡೆ ಹೊರಟ

ಈ ಅಂಕ ಕಳೆಗೂಡಲಿಲ್ಲವಾದರೂ ಜನ ಎಂದಿನಂತೆ ಹರ್ಷೋನ್ಮಾದದಿಂದ ಕೂಗಾಡಿದರು. ನಾಟಕ ಮುಗಿದು ಜನ ಚೆದುರಿದ ಮೇಲೆ ನಾರಾಯಣರಾಯರು ರಾತ್ರಿಯ ಆಟದ ಪ್ರಥಮಾಂಕಕ್ಕಾಗಿ ರಂಗಭೂಮಿಯನ್ನು ಸಜ್ಜುಗೊಳಿಸುತ್ತಿದ್ದಾಗ, ಎತ್ತರವಾದ ಮೈಕಟ್ಟಿನ ಯುವಕನೊಬ್ಬ ಅವರ ಬಳಿಗೆ ಬಂದ.

"ನೀವಲ್ಲವೆ ನಿರ್ದೇಶಕರು?" ಎಂದು ಆಗುಂತಕ ಮುಗುಳ್ನಗೆಯೊಡನೆ ಪ್ರಶ್ನಿಸಿದ "ನಾಟಕ ತುಂಬಾ ಚೆನ್ನಾಗಿತ್ತು; ನಿಮ್ಮನ್ನು ಅಭಿನಂದಿಸುವ ಸಲುವಾಗಿ ನಿಮ್ಮನ್ನು ಹುಡುಕಿಕೊಂಡು ಬಂದೆ. ನನ್ನ

ಹೆಸರು ಲಕ್ಷ್ಮಣ ಸಿಂಗ್--ಇಲ್ಲೇ ಆರೋಗ್ಯ ಭವನದಲ್ಲಿದ್ದೇನೆ-
ಹಳೇ ನಾಟಕ ನೀವು ಹೇಗೆ ಆಡುತ್ತಿದ್ದೀರ ನೋಡಬೇಕು ಅನ್ನಿಸಿತ
ಬಂದೆ."

ಅನಂತ ದೇಸಾಯಿಯನ್ನು ನೋಡುವ ಆತುರದಲ್ಲಿ ನಾರಾಯಣ
ರಾಯರು ಅಭಿನಂದನೆಗೆ ಪ್ರತ್ಯಭಿನಂದನೆ ಸಲ್ಲಿಸಿ ಹೆಜ್ಜೆ ಹಾಕತೊಡ
ದರು. ಆಗ ಲಕ್ಷ್ಮಣಸಿಂಗ್ ನಾರಾಯಣರಾಯರ ರಟ್ಟೆ ಮುಟ್ಟಿದ
"ನನ್ನ ಸ್ನೇಹಿತ– ನನ್ನ ಜೊತೆ ಆರೋಗ್ಯ ಭವನದಲ್ಲಿದ್ದಾನೆ. ಅವ
ಪರಿಚಯ ಮಾಡಿಕೊಡೋಣವೆಂಬ ಅಭಿಲಾಷೆಯಿಂದೆ ಈ ನಾಟ
ನೋಡೋದಕ್ಕೆ ಬಂದೆನಲ್ಲ. ಯಾಕೆ ಗೊತ್ತೆ? ಸುಮಾರು ಇಪತ್ತು ವರ್ಷ
ಗಳ ಕೆಳಗೆ ನಾಟ್ಯವಿಲಾಸಿಗಳು ಈ ನಾಟಕವಾಡಿದಾಗ ನಾನು ಭಾಗ
ವಹಿಸಿದ್ದೆ ಆ ನೆನಪು ಮರುಕಳಿಸಿ ಇಲ್ಲಿಗೆ ಬರುವ ಆಸೆಯುಂಟಾಯಿತು.

ನಾರಾಯಣರಾಯರು ಮೊದಲ ಬಾರಿಗೆ ಆಗುಂತುಕನನ್ನು ದಿಟ್ಟಿ
ಸಿದರು ಅವರ ಕಣ್ಣಲ್ಲಿ ಏನೋ ಮಿಂಚಿತು. "ನೀವೂ ನಟರೆ?"
ಪ್ರಶ್ನಿಸಿದರು.

ಲಕ್ಷ್ಮಣಸಿಂಗ್ ನಕ್ಕ "ಆಗಿದ್ದೆ, ಯುದ್ಧಾನಂತರ ಕೈಹಾಕಿದ
ಹಲವೆಂಟು ಬಾಬುಗಳಲ್ಲಿ ಇದೂ ಒಂದು ಜೀವನೋಪಾಯಕ್ಕಾಗಿ ಅಭಿ
ನಯ ವಿದ್ಯೆಯನ್ನು ಆಶ್ರಯಿಸಬೇಕೆಂದು ಪ್ರಯತ್ನಿಸಿದೆ. ಎಷ್ಟರ
ಮಟ್ಟಿಗೆ ಕಲೆಯಲ್ಲಿ ಯಶಸ್ಸು ಗಳಿಸಿದೆನೋ ನಾನೇ ಅರಿಯೆ!"

"'ಎರಡು ಹಾಸಿಗೆ' ನಾಟಕದಲ್ಲಿ ಪಾತ್ರ ವಹಿಸಿದ್ದೆ ಎಂದಿರಲ್ಲ
ಯಾವ ಪಾತ್ರ?"

ಲಕ್ಷ್ಮಣಸಿಂಗ್ ಮತ್ತೆ ನಕ್ಕ "ಖಳನಾಯಕ, ಆರು ಸಾರಿ ಆ
ಪಾತ್ರ ವಹಿಸಿದ್ದೆ'.

ನಿರ್ದೇಶಕ ಪುನ ದಿಟ್ಟಿಸಿದ. ಒಂದು ಸಾರಿ ಬಲ ಮುಂಗೈ
ಯನ್ನು ಎಡ ಅಂಗೈ ಮೇಲೆ ಅಪ್ಪಳಿಸಿದ. "ನಂಬಿ ಕರೆದರೆ ಓಗೊಡನೆ
ಶಿವನು" ಎಂಬ ವಚನ ಭಾಗ ಬಾಯಿಂದ ಬಂತು. ಲಕ್ಷ್ಮಣಸಿಂಗ
ನನ್ನುದ್ದೇಶಿಸಿ "ನೋಡಿ ಸ್ವಾಮಿ ನಾವೆಲ್ಲ ತಾಪತ್ರಯದ ಬಲೆಯಲ್ಲಿ
ಸಿಕ್ಕುಬಿದ್ದಿದ್ದೇವೆ. ಖಳನಾಯಕ ಪಾತ್ರಧಾರಿ ಇಂದು ನಮ್ಮನ್ನು ನಡು

ನೀರಿನಲ್ಲಿ ಬಿಟ್ಟು ಹೋಗಲಿದ್ದಾರೆ - ಸುಲೋಚನೆ ಒಪ್ಪುವುದಾದರೆ—ನೀವು ಖಳನಾಯಕನ ಪಾತ್ರವಾಡಲು ಸಿದ್ಧರಿದ್ದೀರಾ?''

''ದೇವರೇ ಕಾಪಾಡಬೇಕು" —ಎಂದು ಗಹಗಹಿಸಿದ ಸಿಂಗ್ ಮುಂದುವರಿದು ''ನಾನು ಪಾತ್ರವಹಿಸಿ ಯುಗಗಳು ಕಳೆದು ಹೋಗಿವೆ. ಈಗ ಅಭಿನಯಿಸಬೇಕಾದರೆ ಬಾಯಿಪಾಠಕ್ಕೆ, ರೀಹರ್ಸಲ್‌ಗೆ ಕಾಲ ಬೇಕು" ಎಂದ.

''ಸರಿ ಆ ಮಾತು. ಈ ರಾತ್ರಿ ಆಟಕ್ಕೆ ದೇಸಾಯಿಯನ್ನು ಉಳಿಸ ಬೇಕು. ಇಲ್ಲ ನಾಟಕವನ್ನೇ ನಿಲ್ಲಿಸಬೇಕು. ,ನಾಳೆ ಮ್ಯಾಟಿನಿಯಿಲ್ಲ. ಈ ರಾತ್ರಿಯಿಂದ ಬಾಯಿಪಾಠಕ್ಕೆ ಆರಂಭ ಮಾಡಿದರೆ ನಾಳೆ ರಾತ್ರಿ ಪ್ರದರ್ಶನದ ಹೊತ್ತಿಗೆ ಸಿದ್ಧರಾಗಬಲ್ಲಿರಾ?"

ಸಿಂಗ್ ತನ್ನ ಗೆಳೆಯನ ಕಡೆತಿರುಗಿದ, "ಏನಂತಿಯಾ ಮಿತ್ರಾ ಜೊತೆ ತಪ್ಪುತ್ತೆ' ನಿನಗೆ ಬೇಸರವಾಗುತ್ತೆ ಅಲ್ಲವೇ - ಆದರೇನು ಈ ಸಂದಿಗ್ಧ ಸಮಯದಲ್ಲಿ ಸುಲೋಚನಾ ದೇವಿಗೆ ನೆರವಾಗಬೇಕು ಅನ್ನಿಸುತ್ತೆ ನನಗೆ''

"ಆಗಲಿ" ಎಂದೊ ಏನೋ ಗೊಣಗುಟ್ಟಿದ್ದ ಗೆಳೆಯ.

''ಬೇರೆ ಏನೂ ತಿಳೀಬೇಡಿ— ನಾನು ಹೋಗಿ..." ಎನ್ನುತ್ತಿದ್ದಂತೆ ನಾರಾಯಣ ರಾಯರ ವಾಣಿಯೂ ಅವರ ಶರೀರದೊಡನೆ ಅಂತರ್ಧಾನವಾಯಿತು.

ತಾವಿಬ್ಬರೇ ಇರುವುದೆಂದು ಖಾತ್ರಿಯಾದಾಗ ಸಿಂಗ್ ಗೆಳೆಯನ ಬೆನ್ನು ತಟ್ಟಿ'' ನಾಗನೋಡು ಹೇಗಿದೆ ಮಂತ್ರ! "ಎಂದ.

ಹತ್ತು ನಿಮಿಷ ಕಳೆಯುವ ಮುಂಚೆಯೇ ಆಗಂತುಕರು ಸುಲೋಚನೆಯ ಕೊಠಡಿಯಲ್ಲಿ ಕುಳಿತಿದ್ದರು ಸಿಂಗನ ನೇತ್ರದ್ವಯಗಳು ಸುಲೋಚನೆಯ ನೇತ್ರಗಳಲ್ಲೇ ಲೀನವಾಗಿದ್ದವು.

ಅವಳ ಕಣ್ಣುಗಳು ಸ್ವಲ್ಪ ಗುಳಿಬಿದ್ದಿದ್ದವಾದರೂ ಹುಚ್ಚು ಪ್ರಣಯದ ಮಿಂಚು ಮಾತ್ರ ಬಳ್ಳಿಹಾಯುತ್ತಿತ್ತು. "ನಿಮ್ಮೊಂದಿಗೆ ನಾಯಕನ—ಖಳನಾದರೂ—ಪಾತ್ರ ಅಭಿನಯಿಸುವ ಅವಕಾಶ ದೊರೆತದ್ದು ನನಗೊಂದು ಹೆಮ್ಮೆ ಶ್ರೀಮಂತಿಯವರೇ" ಎಂದು ಮೃದುವಾಗಿ, ಅನಂತ

ದೇಸಾಯಿಯ ಮಾತಿಗೂ ಮೇಲುವಾಗಿ ನುಡಿಯುತ್ತಿದ್ದ ಸಿಂಗ್. ಮಾತ
ಗಳ ಇಂಪಿನ ಸೆರೆಯಲ್ಲಿ ಸುಲೋಚನೆ ಬಂಧಿತಳಾಗಿಯೇ ಹೋದಳು.

ನಾರಾಯಣ ರಾಯರಿಗೂ ಮನಸ್ಸಿಗೆ ನೆಮ್ಮದಿಯಾಯಿತು. ಉದಾ
ರ ಮತಿಯಿಂದ ಅಥವಾ ಮನೋದೌರ್ಬಲ್ಯದಿಂದ ಎಂದರೂ ಎನ್ನ
ಬಹುದು— ರಾತ್ರಿಯ ಆಟಕ್ಕೆ ನಿಲ್ಲಲು ದೇಸಾಯಿ ಒಪ್ಪಿದ. ಅಂದ
ಸಂಜೆ ೭-೧೫ರ ಎಕ್ಸ್‌ಪ್ರೆಸ್ ಗಾಡಿ ಸಿಕ್ಕುವಂತಿಲ್ಲ ೧೧-೫ರಲ್ಲಿ ಹೊರಟರೆ
ಪಾಂಸೆವಿನ ಸ್ಟೇಷನ್ನಿನಿಂದ ಗ್ರಾಮಕ್ಕೆ ಗಾಡಿ ಸಿಕ್ಕುವ ಸಂಭವ
ಕಡಿಮೆ. ಅಂತೂ ಕೋಣೆ ಹಾಳು ಮುಟ್ಟಬೇಕಾದರೆ ಶುಕ್ರವಾರ ಉದ
ಯವಾಗುತ್ತದೆ. ಅಂದರೆ ಮೂರು ದಿನದ ಪ್ರಯಾಣ. ಶುಕ್ರವಾರಕ್ಕೆ
ಮುಂಚೆ "ತಂತಿ ಬಂದಿರಲಿಲ್ಲ. ಸುಂದರೀ ಕಾಂತ ಎಂಬವರು ಯಾರೂ
ಇಲ್ಲ" ಎಂಬಂಶಗಳು ಅವನಿಗೆ ಗೊತ್ತಾಗುವಂತಿಲ್ಲ. ಭೀಮರಾವ್
ಯಾನೆ ಲಕ್ಷ್ಮಣ ಸಿಂಗ್‌ಗೆ ಬೇಕಾದ್ದು ಇಷ್ಟೆ.

೦೦೦೦

ಗುರುವಾರ ಬೆಳಿಗ್ಗೆ ಮಳೆಸುರಿಯುತ್ತಿದ್ದುದರಿಂದ ನಾಟಕ ಸಂಘ
ದವರ ನಲಿದಾಟವೆಲ್ಲ ಮನೆಯೊಳಗೆ ಸಾಗಬೇಕಾಯಿತು. ಹಿಂದಿನ
ದಿನವೊಂದರ ಅಭಿನಯದಿಂದಲೇ ಲಕ್ಷ್ಮಣ ಸಿಂಗ್ ಸುಲೋಚನೆಯ
ಮೆಚ್ಚುಗೆ ಪಡೆದಿದ್ದ. ಸಂಘದ ಆವರಣದಲ್ಲೇ ನೆಲೆಸಲು ಅವನನ್ನೂ
ವಿಧಿಯಿಲ್ಲದೆ ಅವನ ಸ್ನೇಹಿತನನ್ನು ಆಹ್ವಾನಿಸಿದಳು; ಮಧ್ಯಾಹ್ನದ
ಉಪಹಾರಕ್ಕೆ ಆವರು ಬರಬೇಕಿತ್ತು. ಈ ಮುಂಚೆ ಮಿಕ್ಕುಳಿದ ಆಹ್ವಾ
ನಿತರ ಸಂತೋಷಕ್ಕಾಗಿ ಸುಲೋಚನೆ ರಂಗಭೂಮಿಯಲ್ಲಿ ತಂದುತೂಗು
ಹಾಕಿದ್ದ ಸುಪ್ರಸಿದ್ಧ ಚಿತ್ರಕಲಾವಿದರ ಮೂಲ ಚಿತ್ರಗಳ ಪರಿಚಯ
ಮಾಡಿಕೊಡುತ್ತಿದ್ದಳು.

"ಅಬ್ಬಾ ಏನು ಸೊಗಸು, ಎಂತಹ ಪ್ರತಿಭೆ!" ಎಲ್ಲ ಕಲೆಗಳನ್ನು
ಬಲ್ಲವರಂತೆ ತೋರಿಸುತ್ತಿದ್ದ ಸುಂದರಯ್ಯ ನುಡಿದರು.

"ಚಿತ್ತಾಕರ್ಷಕವಲ್ಲವೆ?" ತೆಳ್ಳಗೆ ಉದ್ದವಾಗಿದ್ದ ನಲವತ್ತೈದು
ವಿಾರಿದ ವಯಸ್ಸಿನ ನಾಡಿಗ ಕೇಳಿದ.

"ಈ ಚಿತ್ರಗಳ ಒಟ್ಟು ಬೆಲೆ ದಶ ಸಹಸ್ರಕ್ಕೂ ಹೆಚ್ಚಿದ್ದೀತಲ್ಲವೇ ಶ್ರೀಮತಿಯವರೆ'' ಸುಂದರಯ್ಯನ ನಾಲಗೆಯಲ್ಲಿ ನೀರೂರಿತ್ತು.

"ಕೊಟ್ಟದುದ್ದು ಹತ್ತೆಂಟುಕಾಸ" ನಿರ್ಲಕ್ಷ್ಯಮನೋಭಾವದಿಂದ ಉತ್ತರವಿತ್ತಳು ಸುಲೋಚನೆ" ದುಡ್ಡು ದಂಡ, ಅರ್ಥವಿಲ್ಲದ ಗೆರೆಗಳು ಕೈಯೆಲ್ಲೋ, ಕಾಲೆಲ್ಲೋ ತಲೆಯೆಲ್ಲೋ ಕಾಲುಗಳೋ— ವಿಕಾರ" ಪಕಪಕನೆ ನಕ್ಕಳು.

ಸುಂದರಯ್ಯ ನಾಡಿಗನ ಕಡೆ ತಿರುಗಿ ನುಡಿದ "ನನ್ನಭಿಪ್ರಾಯ ನಿಮಗೂ ಸಮ್ಮತಿ ತಾನೆ? ನಿಮಗೂ ಇವುಗಳ ಬೆಲೆ ಗೊತ್ತಿರಬೇಕು?"

"ಅಷ್ಟಾಗಿ ಅರಿಯೆ. ಕಲಾದೃಷ್ಟಿಯಿಂದ ಇದಕ್ಕೆ ಅಗಣಿತ ಬೆಲೆ, ಪೇಟೆ ಬೆಲೆ ಅಷ್ಟಾಗಿ ಇದ್ದಂತೆ ಕಾಣೆ. ಇಂತಹದಕ್ಕೆ ದುಡ್ಡು ಸುರಿಯು ವವರು, ತಮ್ಮ ಸ್ನೇಹಿತರ ಕಣ್ಣು ಅಸೂಯೆಯಿಂದ ತುಂಬಲಿ, ಅವರು ನೋಡಿ ಭೇಷ್ ಅನ್ನಲಿ ಎಂದು ಕೊಳ್ಳುತ್ತಾರೆಂದೇ ನನ್ನ ಭಾವನೆ. ಸಾರ್ವಜನಿಕ ಕಲಾಭವನಗಳು ಇವಕ್ಕೆ ತಕ್ಕ ಸ್ಥಳ; ಆದರೆ ಅವು ಇಷ್ಟೊಂದು ಹಣ ಸುರಿಯ ಬಲ್ಲವೆ?"

"ನೋಡಿ ಚೆನ್ನಾಗಿ ನೋಡಿ" ಎನ್ನುತ್ತ ಸುಲೋಚನ ಕೋಣೆ ಯಿಂದಾಚೆಗೆ ಸಾಗಿದಳು.

ಸ್ವಲ್ಪ ಹೊತ್ತು ಜನ ಆಕಳಿಸಿದರು, ಮೈಮುರಿದರು. ನಾಡಿಗ ಮಾತಿಗೆ ಮತ್ತೆ ಆರಂಭಿಸಿದ ''ಈ ಲಕ್ಷ್ಮಣಸಿಂಗ್ ಪರಿಚಯ ಯಾರಿ ಗಾದರೂ ಇದೆಯೆ?'' "ಕ್ಯಾ ಲಕ್ಷ್ಮಣಸಿಂಗ್" ಎಂದು ದನಿಗೂಡಿಸಿ ದಳು ಲಲನಾಮಣಿ.

''ಹಾದೇನು?"

"ಹು'' ಎಂದಳು ಚಂದ್ರವದನಾ.

ಸುಂದರಯ್ಯನಿಗೂ ಮಾತಿನಲ್ಲಿ ಆಸಕ್ತಿ ಹುಟ್ಟಿತು. ''ಯಾರು ಕೊಟ್ಟರಪ್ಪ ಈ ಕ್ಯಾಪ್ಟನ್ ಪದವಿ? ನಿಮಗೆ ಗೊತ್ತೆ ರಾಜಶೇಖರ?"

"ನಾ ಕೇಳಿಲ್ಲ'' ನಾಡಿಗ ಮತ್ತೆ ಬಾಯಿಹಾಕಿ.

"ಅವನು ಕ್ಯಾಪ್ಟನ್ನೆಂದು ನಿಮಗೆ ಹೇಗೆ ಗೊತ್ತು ಶ್ರೀಮತಿ ಚಂದ್ರವದನಾ?"

"ಸರಿಯಾದ ಪ್ರಶ್ನೇನೆ ಕೇಳಿದಿರಿ. ಪತ್ರಿಕೆ ಸುದ್ದಿಗಾರರು ಆತನ ವಿಷಯ ನನ್ನ ಬಳಿ ಪ್ರಸ್ತಾಪಿಸಿದಾಗ ಆತನ ವಿಸಿಟಿಂಗ್ ಕಾರ್ಡ್ ತೋರಿಸಿದರು. ಆದರಲ್ಲಿ 'ಕ್ಯಾಪ್ಟನ್ ಲಕ್ಷ್ಮಣಸಿಂಗ್' ಎಂದು ಅಚ್ಚಾಗಿತ್ತು"

"ಏನಪ್ಪ ಎಂತಹ ಅಧೋಗತಿ ಸೈನ್ಯಕ್ಕೆ ರಾಜಶೇಖರ್!"

ರಾಜಶೇಖರ ಬೇಸರದ ಧ್ವನಿಮಾಡಿದ.

ಲಲನಾಮಣಿಗೆ ಹೊಸಬನ ಪರ ವಹಿಸಿ ಮಾತನಾಡಬೇಕೆಂಬ ಆಸೆಹುಟ್ಟಿ "ಯುದ್ಧಕಾಲದ ಅಧಿಕಾರಿಯಿರಬಹುದು" ಎಂದಳು.

ಚಂದ್ರವದನೆ ಈ ಭಾಷ್ಯಕ್ಕೆ ಗಮನಕೊಡದೆ ತನ್ನ ಮಾತನ್ನೇ ಮುಂದುವರಿಸಿ "ನಾರಾಯಣರಾಯರು ಎಲ್ಲಿ ಹುಡುಕಿದರೋ ಈತನ್ನ?" ಎಂದಳು.

"ನಾರಾಯಣರಾಯರನ್ನು ಈತ ಹಿಡಿದನೋ ಏನೋ? ವಿಚಿತ್ರ!" ನಾಡಿಗ ಧ್ವನಿಯೆಳೆದ.

"ನಿಜವಾಗಿಯೂ ಆತ ಕ್ಯಾಪ್ಟನ್ನೇ" ಲಲನಾಮಣಿ ಉನ್ಮಾದ ಧ್ವನಿಯಲ್ಲಿ ನುಡಿದಳು. "ರಾಜಶೇಖರ್ ಸೇನಾ ಇಲಾಖೆಗೆ ಫೋನ್ ಮಾಡಿನೋಡಿ ಈ ಹೆಸರಿನ ಇಸಮು ಇದ್ದಾನೆಯೇ ಹೇಗೆ ಎಂದು!"

"ಸೇನಾ ಇಲಾಖೆಗೆ ಇದಕ್ಕಿಂತ ಹೆಚ್ಚಿನ ಕೆಲಸವಿದೆ ಶ್ರೀಮತಿಯವರೆ" ಎಂದ ರಾಜಶೇಖರ್. ಆತನ ಚಿತ್ತ ಚಿಂತನೆಯಲ್ಲಿ ಲೀನವಾಯಿತು. ಈ ಮಧ್ಯೆ ಚಂದ್ರವದನಾ ಮತ್ತು ನಾಡಿಗ ಒಬ್ಬರನ್ನೊಬ್ಬರು ದೃಷ್ಟಿಸಿದರು. ಚಂದ್ರವದನ ಕಿಟಕಿಯ ಬಳಿಗೆ ಎದ್ದು ಸಾಗಿದಳು.

ooo

ಹೊತ್ತಿಗೆ ಸರಿಯಾಗಿ ಅವರಿಬ್ಬರೂ ಬಂದರು. ಸಿಂಗ್‌ನ ಒಂದು ಪಕ್ಕಕ್ಕೆ ಸುಲೋಚನಾ ಮತ್ತೊಂದು ಪಕ್ಕಕ್ಕೆ ಚಂದ್ರವದನಾ ಕುಳಿತರು. ಸುಲೋಚನೆಯ ಗಾಳಿ ತುಂಬ ಹಿತಕರವಾಗಿತ್ತು. ಚಂದ್ರವದನೆಯೂ ಲಕ್ಷಣವಾಗಿಯೇ ಇದ್ದಳಾದರೂ ಆವಳ ಪ್ರಶ್ನೆ ಪರಂಪರೆಗಳು ಮಾತ ರುಚಿಕರವೆನಿಸಲಿಲ್ಲ. ಮೇಜಿನ ತುತ್ತ ತುದಿಯಲ್ಲಿ ಲಲನಾಮಣಿಯು ಪಕ್ಕದಲ್ಲಿ ಸಿಂಗನ ಮಿತ್ರ ಕುಳಿತ. ಅವನಿಗಿಷ್ಟವಾಗಿದ್ದ ರೇಸಿಂಗ್

ವಿಷಯುವೇ ಲಲನಾಮಣಿಗೂ ಬೇಕೆಂಬುದನ್ನು ಅರಿತ ಮೇಲಂತೂ ನೆರೆ ತುಂಬಾ ಸಂತೋಷವಾಯಿತು ಆತನಿಗೆ. ಇತ್ತ ಸಿಂಗ್‌ನ ಲಕ್ಷ್ಯವೆಲ್ಲ ಪೂರ್ಣವಾಗಿ ಸುಲೋಚನೆಯ ಮೇಲೆ ಕೇಂದ್ರೀಕೃತವಾಯಿತು. ಅವಳೂ ಅವನಲ್ಲಿ ಅತ್ಯಾಸಕ್ತಿ ತೋರಿದಳು. ವ್ಯವಹಾರವೆಲ್ಲ ಸೊಗಸಾಗಿಯೇ ಬಲಿಯಿತು. ಇಲ್ಲಿಯ ವರೆಗಿನ ಪ್ರಯತ್ನವೆಲ್ಲ ಯಂತ್ರದಂತೆ ಲೆಖ್ಖಾಚಾರದ ಪ್ರಕಾರ ಆಗುತ್ತ ಬಂತಾದರೂ ಮುಂದಿನ ಹೆಜ್ಜೆಯೇ ಅತಿ ಮುಖ್ಯವಾದ್ದು; ಅಲಂಕರಿಸಿಕೊಳ್ಳದಿದ್ದಾಗ ಪದಕವನ್ನು ಇಡುತಿದ್ದುದೆಲ್ಲಿ? ಆ ಸ್ಥಳವನ್ನು ಪತ್ತೆ ಮಾಡಲೇಬೇಕು. ಏಕೆಂದರೆ ತೊಟ್ಟ ಕುತ್ತಿಗೆಯಿಂದ ದನ್ನು ಹಾರಿಸುವಂತಿಲ್ಲ: ಇದ್ದಕ್ಕಿದ್ದಂತೆ ಅವನ ಸುಪ್ತಚಿತ್ತದಲ್ಲೊಂದು ಧ್ವನಿ ಕೇಳಿಸಿದಂತಾಯಿತು.

“ಅಲ್ಲಾ ಶ್ರೀಮತಿಯವರೇ ನನಗೊಂದಾಶ್ಚರ್ಯ, ನಾಟಕದಲ್ಲಿ ಅಭಿನಯಿಸುವಾಗ ಇಂತಹ ಅಪರಿಮಿತ ಬೆಲೆಯ ಪದಕವನ್ನು ಧರಿಸುತ್ತೀರಲ್ಲ, ನಿಮ್ಮ ಧೈರ್ಯ ಮೆಚ್ಚತಕ್ಕದ್ದೇ—ಈ ಮಾತನ್ನು ಹೃತ್ಪೂರ್ವಕವಾಗಿ ಆಡುತ್ತಿದ್ದೇನೆ. ಈ ರೀತಿ ನೀವು ನಾಟಕದಲ್ಲಿ ಧರಿಸುವುದು ಸುರಕ್ಷಿತವೇ?” ಈ ಪ್ರಶ್ನೆ ಕೇಳಿದವನು ನಾಡಿಗ.

ಲಕ್ಷ್ಮಣಸಿಂಗ್ ತನ್ನ ಆಟ ಬಿಚ್ಚಿದ; ಕಾರ್ಯತಃ ಅಲ್ಲದಿದ್ದರೂ ಮಾತಿನಲ್ಲಿ. ಈಗ ಕೇಳಿದ ಪ್ರಶ್ನೆಯನ್ನು ತಾನೇ ಕೇಳಬೇಕೆಂದು ಬಹಳ ಹೊತ್ತಿನಿಂದಲೂ ತುಳುಕುತಿದ್ದನಾದರೂ “ನೇರ, ವಕ್ರ” ಎಂದು ಆ ಆಸಕ್ತಿಯನ್ನು ತಡೆದಿದ್ದ. ಈ ಪ್ರಶ್ನೆ ಕಿವಿಗೆ ಬಿದ್ದದ್ದು ರಾಜಶೇಖರರನಿಗೆ ಆಶ್ಚರ್ಯವನ್ನುಂಟು ಮಾಡಿತು. ಪ್ರಶ್ನೆ ಕೇಳಿದ ನಾಡಿಗ ಎಂದಿನಂತೆ ತಿಂಡಿ ತುರುಕುವುದರಲ್ಲಿ ಮಗ್ನನಾಗಿದ್ದ.

ಈ ಪ್ರಶ್ನೆಯಿಂದ ಸುಲೋಚನೆ ಬೆಚ್ಚಲಿಲ್ಲ. “ಓಹೋ! ಯಾರೂ ಕಾಣದ ಸ್ಥಳದಲ್ಲಿ ಭದ್ರವಾಗಿ ಇಟ್ಟಿರುತ್ತೇನೆ—ಇಷ್ಟೇ ಅಲ್ಲ ಅದಕ್ಕೆ ವಿಮೆ ಮಾಡ್ಸಿದ್ದೇನೆ”.

“ಆದರೆ ಇನ್ನೊಂದು ಇಂತಹ ಒಡವೆ ಮಾಡಿಸಲಾದೀತೆ!” ನೆರೆಯವನ ಕುತೂಹಲ ಅಡಗಿಸುವ ಸಲುವಾಗಿ ಸಿಂಗ್ ಬಾಯಿ ಹಾಕಿದ.

“ಸೌಕರ್ಯವೊಂದು ಇತ್ತೆಂದರೆ ಇಂತಹವೆಷ್ಟನ್ನು ಬೇಕಾದರೂ

ಮಾಡಿಸಬಹುದು. ಇರಲಿ, ನಾಟಕಾರಂಭಕ್ಕೆ ಮುಂಚೆ ಸ್ವಲ್ಪ ಗಾಳಿಯಲ್ಲಿ ಅಡ್ಡಾಡೋಣ ಬನ್ನಿ" ಎಂದಳು ಮಂದಹಾಸ ಬೀರುತ್ತ ಸುಲೋಚನೆ.

ರಾಜಶೇಖರ ಚಂದ್ರವದನಾ ಸುಲೋಚನೆಯರೊಂದಿಗೆ ಕೈತೋಟಕ್ಕೆ ಕಾಲಿಟ್ಟ. ಜೋಗಿನ ಮಳೆಯಿಂದ ಹವ ತಂಪಾಗಿ ಹಿತಕರವಾಗಿತ್ತು.

"ಲಲನಾಮಣಿಯವರೆ ನಿಮ್ಮ ಮಾತಿನಂತೆ ಸೇನಾ ಇಲಾಖೆಯಲ್ಲಿರುವ ನನ್ನ ಗೆಳೆಯನಿಗೆ ಫೋನ್ ಮಾಡಿದ್ದೆ. ಕ್ಯಾಪ್ಟನ್ ಲಕ್ಷ್ಮಣಸಿಂಗ್ ಎಂಬ ಹೆಸರು ಯುದ್ಧಕಾಲದ ಕ್ಯಾಪ್ಟನ್ನುಗಳ ಪಟ್ಟಿಯಲ್ಲಿದೆ ಎಂದು ಹೇಳಿದ."

"ಹಾಗೇ ಸರಿ" ಲಲನಾಮಣಿಗೆ ಸಂತೋಷ ಸಂಕಟ ಎರಡೂ ಉಂಟಾಯಿತು.

ಸ್ವಲ್ಪ ಹೊತ್ತು ಮೌನ. "ಈ ಮಾತಿನಿಂದ ನಿಮಗೆ ತೃಪ್ತಿಯಾಯ್ತೆ ರಾಜಶೇಖರ?" ಚಂದ್ರವದನಳ ಪ್ರಶ್ನೆ.

"ಏಕೆ? ಇನ್ನೇನಾಗಬೇಕು?"

"ಇನ್ನೂ ಒಂದೆರಡು ಅಂಶ ಕೇಳಿ ತಿಳಿದುಕೊಳ್ಳಬೇಕಾದ್ದಿದೆ. ಯುದ್ಧ ನಿಂತ ಮೇಲೆ ಈ ಕ್ಯಾಪ್ಟನ್ ಏನು ಮಾಡಿಕೊಂಡಿದ್ದ? ಈತನೇ ಕ್ಯಾಪ್ಟನ್ ಲಕ್ಷ್ಮಣಸಿಂಗ್?" ರಾಜಶೇಖರ ದಿಟ್ಟಿಸಿದ. "ಪತ್ತೇದಾರಿ ಕಾದಂಬರಿಯ ವಾತಾವರಣದಲ್ಲಿ ನಾವು ಇದ್ದೇವೆಂದು ನಿಮ್ಮ ಭಾವನೆಯೆ?" ಚಂದ್ರವದನ ಭುಜ ಹಾರಿಸಿದಳು.

"ಹೌದು. ಹಾಗೇ ಇದೆ ಪರಿಸ್ಥಿತಿ. ಬನ್ನಿ ರಂಗಕ್ಕೆ ಕಾಲಿಡಲು ಸಜ್ಜಾಗುವ ಹೊತ್ತಾಗುತ್ತ ಬಂತು" ಮೂವರೂ ಒಳ ಹೊಕ್ಕರು.

oOo

ಗುರುವಾರದ ಮ್ಯಾಟನಿಯ ಎರಡನೆಯ ಅಂಕವಾದಂದಿನಿಂದ ಸಿಂಗ್ ಸುಲೋಚನೆಯನ್ನು ಗ್ರೀನ್ ರೂಮಿನೊಳಕ್ಕೆ ಕರೆದೊಯ್ದು ಬಿಡುವ ಸಂಪ್ರದಾಯವನ್ನಾರಂಭಿಸಿದ. ಸುಲೋಚನೆಯ ಗ್ರೀನ್ ರೂಮು ಪ್ರತ್ಯೇಕವಾಗಿದ್ದು ಅದು ಅವಳ ದಿವಾನ್ ಖಾನೆಯೂ ಆಗಿತ್ತು.

"ನೀವು ಹುಟ್ಟು ಕಲಾವಿದೆ, ಸರಸ್ವತಿಯೂ ಮಾರು ಹೋಗಬೇಕು ನಿಮ್ಮ ಅಭಿನಯ ನೋಡಿ".

ಸುಲೋಚನೆ ಸಂತೋಷದ ಮಿಂಚೊಂದನ್ನು ಬೀರಿದಳು ಅವಳ ಕಣ್ಣುಗಳನ್ನೇ ದಿಟ್ಟಿಸುತ್ತಿದ್ದ ನನ್ನ ದೃಷ್ಟಿಯನ್ನು ಸಿಂಗ್ ಮೆಲ್ಲಗೇ ಎದೆಯ ಮೇಲಿನ ಥಳಥಳಿಸುತ್ತಿದ್ದ ಪದಕದ ಮೇಲಕ್ಕೆ ತಂದ.

ನಿವು ಧರಿಸುವ ವಸ್ತ್ರಾವಳಿಯ ಸೊಗಸು ಕಣ್ಣು ಕೋರೈಸುತ್ತದೆ. ನೆನಸಿದರೆ ಆನಂದದಿಂದ ತಲೆ ಗಿಮ್ಮೆನಿಸುತ್ತದೆ. ಆ ಅಂಕ ಇನ್ನು ಆರಂಭವಾಗಲಿಲ್ಲವೇ ಎಂದು ಕಾತರಿಸುವ ಹಾಗಾಗುತ್ತದೆ.

ಇದೇನು ಇಷ್ಟೊಂದು ಸುಸ್ತು ಸಿಂಗರೆ! ನಿಜವಾಗಿಯೂ ನಿಮಗೆ ಮೆಚ್ಚುಗೆಯಾಯ್ತೆ? ಎನ್ನುತ ಸುಲೋಚನೆ ಬಟ್ಟೆ ಬದಲಾಯಿಸಲು ಡ್ರೆಸ್ಸಿಂಗ್ ರೂಮಿಗೆ ನುಸುಳಿ ಬಾಗಿಲುಹಾಕಿಕೊಂಡಳು.

ಮುಂನಿನ ಅಂಕಕ್ಕೆ ಸಿಂಗ್ ಬಟ್ಟೆ ಬದಲಾಯಿಸಬೇಕಾಗಿರಲಿಲ್ಲ. ತೊಟ್ಟಿದ್ದ ಬಟ್ಟೆಯಲ್ಲಿಯೇ ನಾಯಕಿಯ ಮಲಗು ಮನೆಯೊಳಕ್ಕೆ ಆತ ಕಾಲಿಡಬೇಕಾಗಿತ್ತು. ರಂಗದ ಹಿನ್ನೆಲೆಯ ಮೂಲೆಯೊಂದರಲ್ಲಿ ಕುಳಿತು 'ಕೊರಂಜಿ'ಯನ್ನು ತಿರುವುತ್ತ ತಂಗಿದ ದೃಷ್ಟಿಯೆಲ್ಲ ಚಂದ್ರವದನೆಯ ಕೊಠಡಿಯ ಬಾಗಿಲ ಮೇಲೆ ಕೇಂದ್ರಿಸಿತ್ತು; ಆದರೂ ನೋಡಿದವರಿಗೆ ಅನುಮಾನ ಬರುವಂತಿರಲಿಲ್ಲ.

ಆಗ ಕಾಲ್ ಬಾಯ್ ಸುಲೋಚನೆಯ ಬಾಗಿಲ ಬಳಿ ನಿಂತು ಕೂಗಿದ 'ಮೂರನೆ ಅಂಕದ ಮೊದಲ ದೃಶ್ಯದಲ್ಲಿ ಭಾಗವಹಿಸುವವರು ಸಿದ್ಧರಾಗಿ' ಒಂದೇ ನಿಮಿಷ ಕಳೆಯುವುದರೊಳಗೆ ಅಚ್ಚರಿಗೊಳಿಸುವಂತ ಹ ಅಚ್ಚ ರೇಶ್ಮೆ ಜಾರ್ಜೆಟ್ ಪತ್ತಲ ಧರಿಸಿ ಪತಂಗದಂತೆ ಹಾರಿಬಂದಳು ಸೂಲೋಚನೆ. ಅವಳ ಹಿಂದೆ ಕಾಲಿಟ್ಟ ಹೆಣ್ಣಾಳು ಕೈಮುಗಿದು ಬಾಗಿಲು ಹಾಕಿಕೊಂಡಳು. ಒಂದು ಹತ್ತುನಿಮಿಷ ಸಿಂಗ್ ಉತ್ಸುಕತೆಯಿಂದ ಕಾದ; ಇನ್ನೇನು ಇವನಿಗೂ ಕರೆ ಬರಬೇಕು. ಆಗ ಇಲ್ಲಿರಬಾರದೆಂದು ಆವನಿಗನ್ನಿಸಿತು. ಆ ಕೋಣೆಯ ಬಾಗಿಲು ತೆರೆಯಿತು. ಹೆಣ್ಣಾಳು ಹೊರ ಬಂದು ಬಾಗಿಲು ಎಳೆದು ಬೀಗ ಹಾಕಿ ಹತ್ತಿರದ ಮಹಡಿ ಮೆಟ್ಟಲು ಹತ್ತಿದಳು. ಅವಳ ಹೆಗಲ ಮೇಲೆ ಸುಲೋಚನೆ ತೆಗೆದು ಹಾಕಿದ್ದ ಸೀರೆ, ರವಕೆ, ಕಾಲು ಚೀಲಾದಿಗಳಿದ್ದವು; ಒಂದು ಕೈಯಲ್ಲಿ ಬೂಡ್ಸು; ಇನ್ನೊಂದು ಕೈ ಖಾಲಿ. ಒಡನೆ

ಪೆಟ್ಟಿಗೆ ಮಾತ್ರ ಕಾಣಲಿಲ್ಲ. ಮುಚ್ಚಿ ಮಡಿಲಲ್ಲಿ ಇಟ್ಟುಕೊಂಡಿರಬಹ ದೇನೊ ಎಂಬ ಯೋಚನೆಯೂ ಮೂಡಿತು. ಆದರೆ......ಪ್ರಾಯಶ ಅವಳೊಂದಿಗೆ ಇರುವ ಸಂದರ್ಭ ಇದ್ದಂತೆ ಕಾಣಲಿಲ್ಲ. ದಿವಾನ ಖಾನೆಯಲ್ಲೆಲ್ಲೋ ಭದ್ರಪಡಿಸಿಟ್ಟಿರಬೇಕು; ಮಲಗುವುದಕ್ಕೆ ಹೋಗು ವಾಗ ಸುಲೋಚನಳೆ ಅದನ್ನು ತನ್ನ ಜತೆಯಲ್ಲಿ ಕೊಂಡೊಯ್ಯುವಳೆಂದು ಬಹುಮಟ್ಟಿಗೆ ತೋರಿತು.

ಹಾಗೆ ಯೋಚನಾ ತರಂಗಗಳ ತುಮುಲ ಮೇದುಳಿನಲ್ಲಿ ಸಾಗು ತ್ತಿದ್ದಾಗ ಇದ್ದಕ್ಕಿದ್ದಂತೆ ಆಶಾಕಿರಣವೊಂದು ಹೊಳೆಯಿತ್ತು. ನಾಗನಿ ಗೇಕೆ ಹಚ್ಚಬಾರದು ಈ ಕೆಲಸವನ್ನು ಒಡವೆಯನ್ನೆಲ್ಲಿಟ್ಟಿದ್ದಾರೆಂಬ ಅಂಶವನ್ನು ಹೆಣ್ಣಾಳಿನಿಂದ ಕೇಳಿ ತಿಳಿದುಕೊಳ್ಳಲಿ. ಆದರೆ ಹೇಳಿದ ಕೆಲಸ ಮಾಡಿ ಮುಗಿಸುವುದರಲ್ಲಿ ನಾಗ ಚುರುಕುಕೇನೋ ಹೌದು ಆದರೆ ಇಂತಹ ನಯಗಾರಿಕೆಯ ವ್ಯವಹಾರದಲ್ಲಿ ಅವನ ಕೈಚಳಕ ಮದ್ದ. ತಾನೇ ಏಕೆ ಆ ಹುಡುಗಿಯನ್ನು ವಿಚಾರಿಸಬಾರದು. ಆದರೆ ಸುಲೋ ಚನೆಯನ್ನು ಬಿಟ್ಟು ಹೋಗುವಂತಿಲ್ಲ......"

ooo

"ಈ ಕೆಲಸ ಮಾಡಲಾರೆ ಭೀಮು ಸೀತೇ ಎಡೆವಿಯೋ ಸಿಕ್ಕಿ ಬಿದ್ದೇನು"

"ಮಾಡಲೇಬೇಕು ನಾಗ. ಹಾಗೆಂದರೇನು ಹುಚ್ಚ—ಇಲ್ಲಿಯ ವರೇಗಿನ ಕೆಲಸವನ್ನೆಲ್ಲ ನಯಗಾರಿಕೆಯಿಂದ ಸಾಕುಮಾಡಿ ಮುಗಿಸಿ ದ್ದೇನೆ. ಆ ದೊಡ್ಡ ಪರದೆಯ ಹಿಂದೆ ಅಡಗಿಕೋ; ಮಧ್ಯೆ ಮಧ್ಯೆ ಇರುವ ಕಂಡಿಯಲ್ಲಿ ನಡೆಯುವುದೆಲ್ಲ ಕಾಣುತ್ತೆ. ನಾನು ನೋಡು. ಈ ಸಂಜೆ ಸುಲೋಚನೆಯೊಂದಿಗೆ ಟೀ ಕುಡಿದೆ. ಒಡವೆಯಿಟ್ಟ ಸ್ಥಳದ ಬಗ್ಗೆ ಸೂಕ್ಷ್ಮ ಜ್ಞಾನ ಕೂಡ ಆಗಲಿಲ್ಲ. ಪದಕ ಕೋಣೆಯಲ್ಲಿದ್ದಾಗ ಮಾತ್ರ ಕೋಣೆ ಬಾಗಿಲಿಗೆ ಬೀಗಬದ್ದಿರುತ್ತದೆ; ಈ ಸಂಗತಿಯನ್ನು ಇಂದು ಕಂಡುಕೊಂಡೆ. ಎರಡನೇ ಅಂಕವಾದ ಮೇಲೆ ಸುಲೋಚನೆ ಬಾಗಿಲು ತಳ್ಳಿಕೊಂಡು ಒಳಹೊಕ್ಕಳು. ನಾಳೆ ಮ್ಯಾಟಿನಿಕಾಲದಲ್ಲಿ ಎರಡನೇ ಅಂಕವಾಗುವಾಗ ನೀನು ಕೋಣೆಯೊಳಕ್ಕೆ ನುಸುಳಬಹುದು.

ಅಂದರೆ ನುಸುಳುವುದು ಸುಲಭವೆಂದೇನೂ ಅಲ್ಲ. ಕತ್ತಲಾಗುವ ವರೆಗೂ ಅವಶ್ಯವೆನಿಸಿದರೆ ರಾತ್ರಿ ಪ್ರದರ್ಶನದ ಎರಡನೆ ಅಂಕದ ವರೆಗೂ ಕಾಯಬೇಕಾಗುವುದು. ಊಟದ ಹೊತ್ತಿಗೆ ಬರಲಾಗದಿದ್ದರೆ ಏನಾದರೂ ನೆವ ಹೇಳಬಹುದು. ಅಂತೂ ಇಂತೂ ಇಂದೇ ಸ್ಥಳ ಪತ್ತೆ ಮಾಡಿದೆಯಾದರೆ ಮುಂದಿನ ಕೆಲಸ ನಾಳೆ ರಾತ್ರಿಯೇ. ಶನಿವಾರ ರಾತ್ರಿಯೇ ಮುಗಿಸಬಹುದು. ಹೆಂಗಸರು ಪಡಸಾಲೆಯಲ್ಲಿ ಮಾತಾಡುತ್ತಾ ಕುಳಿತಿರುವಾಗ ಬಾಗಿಲ ಬೀಗದ ಕೈಯನ್ನೂ ಪದಕವಿರುವ ಪೆಟ್ಟಿಗೆಯ ಕೈಯನ್ನೂ ಐದೇ ನಿಮಿಷದಲ್ಲಿ ಪತ್ತೆ ಮಾಡಿಬಿಡುತ್ತೇನೆ. ಕಾರು ಸಿದ್ಧವಾಗಿಟ್ಟುಕೊಂಡು ಸೀದಾ ಎದ್ದು ಬಿಡಬಹುದು. ಇನ್ನು ತಡಮಾಡುವುದರಿಂದ ಅನಾಹುತವಾದೀತು. ಶುಕ್ರವಾರದ ನಂತರ ದೇಸಾಯಿ ನಮ್ಮ ಯೋಜನೆಯನ್ನು ತಲೆ ಕೆಳ ಮಾಡಿಯಾನು!"

"ನನಗೇನು ಇದು ಸರಿಯಾಗಿ ಕಾಣಿಸುವುದಿಲ್ಲ. ಒಂದು ಸಮಯ ಸಿಕ್ಕಿಬಿದ್ದರೆ ಏನು ಹೇಳು? ನಾಗರಾಜ ಗೊಣಗಿದ.

ಭೀಮರಾಯ ಗುರುಗುಟ್ಟಿದ "ಅಷ್ಟು ತಿಳಿಯದೆ ಮಂಕೆ. ನಿಮ್ಮ ಸೌಂದರ್ಯಕ್ಕೆ ಮಾರು ಹೋಗಿ ಬಂದೆ, ಅಂದರಾಯಿತು"

"ನಿನ್ನ ತಲೆ ನಿನಗೇ ಸರಿ ನಿನ್ನ ಕುಬುದ್ಧಿ"

"ಇಂತಹ ಸುಖವಾದ ಕೆಲಸಕ್ಕೆ ಇಳಿ ಮನಸ್ಸು ಈಗ ನಡಿ ನಿದ್ದೆ ಮಾಡು ಹೋಗು" ಇಷ್ಟಾದರೂ ಭೀಮರಾಯರಿಗೆ ನೆಮ್ಮದಿಯಾಗಿ ರಲಿಲ್ಲ-ಎಲ್ಲಾ ಸುಲಭವಾಗಿ ಸರಳವಾಗಿ ಸಾಗುತ್ತಿತ್ತಾದರೂ ಯಾರೋ ಈ ನಾಟಕ ಅರ್ಥಮಾಡಿಕೊಂಡು ಅನುಕೂಲವಾಗಿಯೇ ಎಲ್ಲವನ್ನೂ ಸಜ್ಜುಗೊಳಿಸುತ್ತಿದ್ದಾರೆ ಎನ್ನುವಂತೆ ತೋರುತ್ತಿತ್ತು ಅವನಿಗೆ.

ooo

ಶುಕ್ರವಾರ ಜೀಗ್ಗೆ ಹೊತ್ತಿಗೆ ಎಲ್ಲರಿಗೂ ಸುಸ್ತಾಗಿತ್ತು. ಈಗಾಗಲೇ ನಾಲ್ಕು ರಾತ್ರೆ ಎರಡು ಮಧ್ಯಾಹ್ನದ ಪ್ರದರ್ಶನಗಳಾಗಿದ್ದು ಇನ್ನೂ ಮೂರು ಪ್ರದರ್ಶನ ಸಾಗಬೇಕಲ್ಲ ಎಂಬ ಯೋಚನೆ ಕಾಡುತ್ತಿತ್ತು. ಸುಲೋಚನೆ ಮಾತ್ರ ಹರ್ಷ ವದನಳಾಗಿಯೇ ನಲಿಯುತ್ತಿದ್ದಳು;

ಅವಳ ಕಷ್ಟವೆಲ್ಲ ಈಗ ಬಂದಿದ್ದ ಹೊಸ ಖಳನ ಜೊತೆಗೆ ಪಾತ್ರವಹಿಸಿ ದಾಗ ಕರಗಿ ಹೋಗುತ್ತಿತ್ತು.

ಸಂತತ ಅಭಿನಯದ ದೆಸೆಯಿಂದ ಮಾತ್ರವಲ್ಲದೆ ಮತ್ತೆ ಯಾವು ದೋ ಕೊಂತೆ-ಸುಲೋಚನ ಹೊರತು ಮಿಕ್ಕುಳಿದವರನ್ನು ಕಾಡುವಂ ತಿತ್ತು. ಎಲ್ಲರ ಮುಖವೂ ಬಿರುಗಾಳಿಯ ನಿರೀಕ್ಷಣೆಯಲ್ಲಿರುವಂತೆ, ಸುಂಟರ ಗಾಳಿಯಲ್ಲಿ ಸುತ್ತಿದಂತೆ ತೋರುತ್ತಿತ್ತು. ಮಧ್ಯಾಹ್ನದ ಪ್ರದರ್ಶನದ ಎರಡನೆ ಅಂಕಕ್ಕೋಸ್ಕರ ಬಟ್ಟೆ ಬದಲಾಯಿಸುವಾಗ ಈ ವಾತಾವರಣ ಭೀಮರಾಯರಿಗೆ ಮನದಟ್ಟವಾಯಿತು. ಈ ಸುಮಾರಿನಲ್ಲಿ ನಾಗರಾಜ, ಸುಲೋಚನೆಯ ಕೋಣೆಯೊಳಕ್ಕೆ ನುಸುಳಿ ಪದಕವಿಡುವ ಸ್ಥಳದ ಪತ್ತೆ ಮಾಡುವ ತರದೂದಿನಲ್ಲಿದ್ದ. ನಾಗರಾಜನೇನೇ ಇಂತಹ ಕೆಲಸಗಳಲ್ಲಿ ಬುದ್ಧಿವಂತನೇ ಹೌದು. ಆದರೂ ಒಮ್ಮೊಮ್ಮೆ ದೊಡ್ಡ ತಪ್ಪುಮಾಡಿ ಬಿಡುತ್ತಿದ್ದ. ನಾನೇ ಈ ಕೆಲಸ ಮಾಡಿದ್ದರಾಗುತ್ತಿತ್ತು ಎಂಬ ಭಾವನೆಯೂ ಭೀಮರಾಯನ ಮನಸ್ಸಿನಲ್ಲಿ ಸುಳಿದು ಹೋಗದೆ ಇರಲಿಲ್ಲ.

ಎರಡನೆ ಅಂಕದ ನಂತರ ಸುಲೋಚನೆಯ ಜೊತೆಯಲ್ಲಿ ಅವಳ ಕೋಣೆಗೆ ಬಂದ. ಅವಳ ಹತ್ತಿರ ಸರಿದು ಮೆಚ್ಚುಕೆಯ ಮಾತುಗ ಳನ್ನಾಡಿದ. ಆ ಮಾತುಗಳು ಅವಳಿಗೆ ಪಂಚಪ್ರಾಣದಂತೆ ತೋರಿ ದವಾದರೂ, ಅವನಿಗೆ ಅವು ಯೋಜನೆಯ ಒಂದು ಕಾರ್ಯಭಾಗವಷ್ಟೆ. ಒಂದೆರಡು ನಿಮಿಷ ಬಾಗಿಲ ಬಳಿ ನಿಂತು ತಮ್ಮ ಆಟ ಬಯಲಾದೀತೇ ನೋ ಎಂಬ ಭೀತಿಯಿಂದ ಆಲೈಸಿದ. ಯಾವ ಶಬ್ದವೂ ಕೇಳಿ ಬರ ದಿರಲು ರಂಗಭೂಮಿಗೆ ಹಿಂತಿರುಗಿದ; ಒಂದು ಸಮಯ ನಾಗರಾಜ ಸಿಕ್ಕಿಬಿದ್ದರೂ ದೂರದಲ್ಲಿದ್ದರೆ, ಏನೇ 'ಧ್ಯೇಯವಾದ ಕುತೂಹಲ' ಎಂದು ಟೀಕಿಸಿ ಪಾರಾಗಬಹುದು ಎಂಬ ಎಣಿಕೆ ಅವನದು.

ಮೂರನೆ ಅಂಕಕ್ಕಾಗಿ ಪರದೆಮೇಲೇಳುವ ಮುಂಚೆ ವಾತಾವರಣ ದಲ್ಲೆಲ್ಲ ಏನೋ ವಿದ್ಯುತ್ ಸಂಚಾರವಾಗಿದ್ದಂತೆ ತೋರಿತು. ಜನ ಗುಸುಗುಟ್ಟುತ್ತಿದ್ದರು; ನಾರಾಯಣರಾಯರ ಮುಖ ಪೆಚ್ಚು ಹೊಡಿ

ದಿತ್ತು; ರಾಜಶೇಖರ ಗಂಭೀರನಾಗಿದ್ದ. ಅದೂ ತೋರುವ ಹಾಗೆ ಏನೂ ನಡೆಯಲಿಲ್ಲ.

ಕಡೆಯ ಅಂಕ ಸಾಗುವಾಗ ಸುಲೋಚನೆಗೂ ಈ ವಾತಾವರಣದ ಪ್ರಭಾವ ತಟ್ಟಿದಂತೆ ತೋರಿತು. ಅವಳಲ್ಲಿ ದ್ವೇಷಭಾವವೇನೂ ಕಾಣಿಸಲಿಲ್ಲ. ಏನೋ ಕುತೂಹಲ, ಏನೋ ಹೊಸ ಅನುಭವ ಮುಖದಲ್ಲಿ ಕಾಣಿಸಿತು. ಭೀಮರಾಯ ಅನಾಹುತಕ್ಕೆ ಸಿಕ್ಕದವನಂತೆ ದೀರ್ಘವಾಗಿ ನಿಟ್ಟುಸಿರು ಬಿಡುತ್ತಾ ತನ್ನ ರೂಮಿಗೆ ಬಂದ. ತನ್ನ ಪಾತ್ರ ಸ್ವರೂಪ ಅಳಿಸಲಿಕ್ಕಾಗಿ ವಿರಾಮ ಕುರ್ಚಿಯ ಮೇಲೆ ನಾಗರಾಜ ಕುಳಿತಿದ್ದ. ಭೀಮರಾಯ ಬಾಗಿಲು ಹಾಕಿದ.

"ನೀನು ಸಿಕ್ಕಿ ಬೀಳಲಿಲ್ಲವೆ?" ನಾಗರಾಜ ಎದ್ದು ನಿಂತು ತನ್ನ ಷರಾಯಿ ಜೇಬಿನೊಳಕ್ಕೆ ಕೈಹಾಕಿದ " ಇಲ್ಲ, ನಾ ಸಿಕ್ಕಿಬೀಳಲೂ ಇಲ್ಲ; ಜೊತೆಗೆ ಮಾಲೂ ತಂದಿದ್ದೇನೆ" ನಾಗರಾಜ ಕೈಯನ್ನು ಜೇಬಿನಿಂದ ತೆಗೆದು ಥಳಥಳಿಸುತ್ತಿದ್ದ ಪದಕವನ್ನೂ ಭೀಮರಾಯನೆಡೆಗೆ ಎಸೆದ. ಭೀಮರಾಯ ಸಹಜವಾಗಿ ಆತನೂ ಆತುಕೊಂಡ. "ಓ ಹೊಡೆದೇಬಿಟ್ಟೆ!"

"ಓಹೋ! ಜೀವಮಾನದ ಅದೃಷ್ಟ. ಏತಕ್ಕೋ ಹೆಣ್ಣಾಳು ಕೋಣೆಯಿಂದಾಚೆ ಹೋದಳು; ಸುಲೋಚನೆ ಪದಕ ತೆಗೆದು ಸೋಫಾದ ಮೇಲಿಟ್ಟು ಬೀರು ತೆಗೆದು ತಗ್ಗಿನ ಖಾನೆ ಎಳೆದಳು. ಅಷ್ಟು ಹೊತ್ತಿಗೆ ಬಾಗಿಲು ತಟ್ಟಿದ ಶಬ್ದ ಕೇಳಿಬಂತು.

'ಯಾರು?' ಎಂದಳು ಸುಲೋಚನೆ, ಗಂಡಸಿನ ಮರು ಧ್ವನಿ ಕೇಳಿಬಂತು. ಬಾಗಿಲನ್ನು ತೆಗೆದಳು. ನಾರಾಯಣ ರಾಯರು ಬೆಚ್ಚಿದ ಧ್ವನಿಯಲ್ಲಿ ಏನೋ ಹೇಳಿದಂತೆ ಕೇಳಿಸಿತು. ದೇಸಾಯಿ ದೇಸಾಯಿ ಅಂದ ಹಾಗೆ ಆಯಿತು. ಬಾಗಿಲು ಹಾಕಿಕೊಂಡು ಅವನ ಜೊತೆಯಲ್ಲೇ ಹೋದಳು. ಹೋಗುವಾಗ ಬೀರು ಬಾಗಿಲು ಬೀಗ ಹಾಕುವುದನ್ನು ಮರೆತಳು. ಬೀಗದ ಕೈಯನ್ನು ಅದರಲ್ಲೇ ಬಿಟ್ಟಳು.

"ಒಂದೆರಡು ನಿಮಿಷ ನಾನು ನಿಂತಲ್ಲಿಯೇ ನಿಂತೆ. ಕೂಡಲೆ ಧಾವಿಸಿ ಪದಕವನ್ನು ಜೇಬಿನಲ್ಲಿ ಸೇರಿಸಿದೆ, ಬಾಗಿಲು ಮರೆ ಮಾಡಿ

ನೋಡಿದೆ. ಯಾರ ತಲೆಯೂ ಕಾಣಲಿಲ್ಲ. ಸೀದಾ ಮರದ ಹತ್ತಿ ಇಲ್ಲಿ ಬಂದೆ".

ಭೀಮರಾಯನ ಮುಖ ಬಿಳಿಚಿತ್ತು. ಕೈಯಲ್ಲಿದ್ದ ಪದಕವನ್ನೊಮ್ಮೆ ನೋಡಿ ನಾಗರಾಜನನ್ನು ದಿಟ್ಟಿಸಿದ. "ಅಯ್ಯೋ ದೇವರೆ! ಎಂಥಾ ಕೆಲಸ ಮಾಡಿದೆ. ಇಬ್ಬರನ್ನು ಗುಂಡಿಗೆ ಕೆಡವಿದೆಯಲ್ಲ. ಪದಕವಿಲ್ಲದ್ದು ಪತ್ತೆಯಾಗುವುದು ಎಷ್ಟು ಹೊತ್ತು. ಓಡಿಹೋಗಲು ಸಾಧ್ಯವೇ? ಕಾರು ಕೂಡಾ ಸಿದ್ಧವಿಲ್ಲ. ಇಲ್ಲೇ ಉಳಿದರೆ ಮಾಲು ಸಮೇತ ಹಿಡಿದು ಹಾಕುವರು".

'ಚೆನ್ನಾಯಿತು. ಅಂತೂ ಏನು ಮಾಡಿದರೂ ನಿನಗೆ ಹಿತವಿಲ್ಲ" ನಾಗರಾಜ ಒರಲಿದ.

"ಹಿತವೇ ಏಳು ವರ್ಷ ಹಿಟ್ಟು ಬೀಸುವ ಆಸೆಯೇ?"

"ಚ್, ಇರಲಿ ಚಂದ್ರವದನೆ ಆಗಲೇ ನನ್ನ ಕೈಲಿ ಹೇಳಿದ್ದಾಳೆ. ವಸಂತ ಪತ್ತೆದಾರಿ ಶಾಖೆಯುವನೆಂದು, ನಿನಗೂ ಹೇಳಬೇಕೆಂದಿದ್ದೆ. ನೀನು ಸಿಕ್ಕಲಿಲ್ಲ".

ಭೀಮರಾಯ ಧಿಗ್ಗನೆ ಎದ್ದು ನಿಂತ. 'ನನಗೆ ಗೊತ್ತಿತ್ತು; ಇದೆಲ್ಲ ನಮ್ಮನ್ನು ಹಿಡಿದುಹಾಕುವುದಕ್ಕಾಗಿ ಸಿದ್ಧಮಾಡಿದ ಯೋಜನೆ ಎಂದು, ಆಗಲೆ ನನಗೆ ಅರ್ಥವಾಗಿತ್ತು. ಆದರೆ ನಮ್ಮನ್ನು ಎಷ್ಟು ಬೇಗ ಪತ್ತೆ ಮಾಡಿದರೋ ದೇವರೇ ಬಲ್ಲ. ಈಗ ಉಳಿದಿರುವುದೊಂದೇ ಮಾರ್ಗ ಇದನ್ನು ಬಚ್ಚಿಡುವುದು. ಊಟಕ್ಕೂ ಹೋಗೋದು, ಧೈರ್ಯವಾಗಿ ರಾತ್ರೆ ಆಟದಲ್ಲೂ ಅಭಿನಯಿಸುವುದು. ಪ್ರಾಯಶ: ಈಗ ನಮ್ಮನ್ನು ಹಿಡಿಯಲಾರರು. ನಾಟಕ ಮುಗಿವ ವರೆಗೂ ಸುಮ್ಮನಿದ್ದಾರು. ಮೊದಲನೆ ಅಂಕ ಪ್ರಾರಂಭವಾದಾಗ ಹೋಗಿ ಕಾರು ತಂದು ನೋಟಕರ ಕಾರುಗಳ ಮಧ್ಯೆ ನಿಲ್ಲಿಸು. ಎರಡನೆ ಅಂಕ ಮುಗಿವ ಹೊತ್ತಿಗೆ ನಾನು ಬಂದು ಬಿಡುತ್ತೇನೆ ಪದಕ ಹಿಡಿದುಕೊಂಡು; ಅಷ್ಟು ಹೊತ್ತಿಗೆ ಕತ್ತಲು ಆಗಿರುತ್ತದೆ, ಓಡಿಬಿಡಬೇಕು, ಛೇ, ಹಾರಿಬಿಡಬೇಕು ಇಲ್ಲಿಂದ' ಕಿಟಕಿಯಿಂದಾಚೆಗೆ ತಲೆಹಾಕಿದ. "ಇಲ್ಲೊಂದು ಪೊದೆ ಕಾಣಿಸುತ್ತಿದೆ. ಕತ್ತೇ

ಕಾಗದದಲ್ಲಿ ಅದನ್ನೂ ಸುತ್ತು. ದಾರಕಟ್ಟು. ತಾ ಇಲ್ಲಿಂದ ಎತ್ತಿ ಹಾಕ್ತ್ತೇನೆ.

ooo

ಕೆಳ ಅಂತಸ್ತಿನಲ್ಲಿ ಏನೇನೋ ಮುಸಲತ್ತು ಸಾಗಿದಂತಿತ್ತು. ಕೋಣೆಯೊಂದರಲ್ಲಿ ರಾಜಶೇಖರ ಸಿಗರೇಟು ಸೇದುತ್ತ ಅಲ್ಲಿಂದ ಇಲ್ಲಿಗೆ ಅಲೆಯುತ್ತಿದ್ದ. ನಾಡಿಗ, ಲಲನಾಮಣಿ, ಚಂದ್ರವದನೆ ಏನನ್ನೂ ನಿರೀಕ್ಷಿಸುತ್ತಿರುವವರಂತೆ ನಿಂತಿದ್ದರು.

"ಇದೇನು ಹೇಳಿ ರಾಜಶೇಖರ್. ನಿಮ್ಮ ಗಂಟಲಲ್ಲೆ ಅಡಗಿಸಿಕೊಳ್ಳಬೇಡಿ, ಉಸಿರು ಕಟ್ಟೀತು" ಚಂದ್ರವದನೆ ನುಡಿದಳು.

ರಾಜಶೇಖರ ಈ ಗುಂಪಿನ ಮುಂದೆ ನಿಂತ. "ಹೌದು. ನಿಮಗೆಲ್ಲ ಹೇಳಲೇ ಬೇಕು. ಯುದ್ಧಖಾತೆ ವಿಚಾರಿಸಿದ್ದೆನಲ್ಲ ಈ ಲಕ್ಷ್ಮಣ ಸಿಂಗ್ ವಿಷಯಾನ. ಈಗ ತಾನೆ ಉತ್ತರ ಬಂದಿದೆ. ಆತ ಕೆಲಕಾಲ ನಟನಾಗಿದ್ದನಂತೆ. ಈಗ ಸತ್ತು ನಾಲ್ಕು ವರ್ಷವಾಗಿದೆಯಂತೆ".

ಎಲ್ಲ ಮೂರ್ಛೆ ಹೋದಂತೆ ಸೌಮ್ಯವಾದರು. ನಂತರ ಮಾತಿನ ಪಟಾಕಿ ಚಟಪಟಗಟ್ಟಿತು ಅರ್ಧಗಂಟೆ. ಈ ಸುದ್ದಿಯ ಹಿನ್ನೆಲೆ ಮುನ್ನೆಲೆ ಪರಿಣಾಮಗಳ ಚರ್ಚೆಯಾಯಿತು. ರಾತ್ರಿ ಪ್ರದರ್ಶನ ಮುಗಿವ ವರೆಗೂ ಯಾರೂ ಏನೂ ಮಾತಾಡಬಾರದೆಂದೂ ನಂತರ ಈ ಅಂಶವನ್ನು ಸುಲೋಚನೆಯ ಅವಗಾಹನೆಗೆ ತರಬೇಕೆಂದೂ ನಿರ್ಧಾರವಾಯಿತು.

ಇತ್ತ ಹಾಲಿನಲ್ಲಿ ಸುಲೋಚನೆಯೂ ನಾರಾಯಣ ರಾಯರೂ ದೇಸಾಯಿಯಿಂದ ಬಂದ ತಂತಿಯನ್ನು ಕುರಿತು ಮಾತನಾಡುತ್ತಿದ್ದರು. 'ತಂದೆಗೆ ಉತ್ತಮವಾಗಿದೆ ಇಲ್ಲಿಂದ ತಂತಿ ಕಳಿಸಿರಲಿಲ್ಲ. ಏನೋ ವಿಚಿತ್ರವಾಗಿದೆ, ಎಲ್ಲಾ ಚೆನ್ನಾಗಿದೆಯೆಂದು ನಂಬುತ್ತೇನೆ'.

ನಾರಾಯಣ ರಾಯರಿಗೂ ಸ್ಥಿತಿ ಅರ್ಥವಾಗಲಿಲ್ಲ. ಆದರೆ ದೇಸಾಯಿ ಸ್ಥಾನ ಆಕ್ರಮಿಸಿದ್ದ ನಟನ ವಿಷಯದಲ್ಲಿ ಮಾತ್ರ ಏನೋ ಅಸಮಧಾನ. ಸುಲೋಚನೆಯ ಮನಸ್ಸು ಉದ್ವಿಗ್ನವಾಗಿತ್ತು. ಆದರೆ ಈ ಕ್ಷಣವೇನೂ ಮಾಡುವ ಹಾಗಿರಲಿಲ್ಲ, ನಿಧಾನವಾಗಿ ಪರಿಶೀಲನೆ

ಮಾಡಬೇಕು. ಊಟಕ್ಕೆ ಸಿದ್ಧವಾಗುವುದಕ್ಕೋಸ್ಕರ ಸುಲೋಚನೆ ತನ್ನ ಕೊಠಡಿಗೆ ಹೋದಳು. ನಾರಾಯಣರಾಯರು ಬಂದು ಬಾಗಿಲು ಬಡಿದಾಗ ಪದಕದ ಪೆಟ್ಟಿಗೆಗೆ ಬೀಗ ಹಾಕದೆ ಇದ್ದ ಸಂಗತಿ ಈಗಲೂ ಅವಳ ನೆನಪಿಗೆ ಬರಲಿಲ್ಲ.

ooo

ಸಂಜೆ ಪ್ರದರ್ಶನದ ಮೊದಲ ಅಂಕ ಮುಗಿಯುತ್ತ ಬಂದಿತು ನಾಯಕಿಗೂ ಅವಳನ್ನು ಮದುವೆಯಾಗದ ಖಳನಿಗೂ ನಡೆದ ಪ್ರಣಯ ಸಲ್ಲಾಪಗಳಿಂದ ಜನ ಶೃಂಗಾರೋನ್ಮಾದ ಮತ್ತರಾಗಿದ್ದರು. ಮದುವೆಯಾಗುವ ನಾಯಕ ಬರುವ ಮುನ್ನ ಕಿಟಕಿಯಿಂದಾಚೆಗೆ ಹಾರಿದ ಭೀಮರಾಯ ಮನೆಯ ಸಣ್ಣ ಬಾಗಿಲಿನಿಂದ ಹೊರಕ್ಕೆ ನುಸುಳಿದ. ಕಿಟಕಿ ಕೆಳಗಿದ್ದ ಪೊದೆಯ ಕಡೆ ಹೊರಟಾಗ ಅವನ ಕೈಯನ್ನು ಯಾರೋ ಹಿಡಿದಂತೆ ತೋರಿತು; ಬೆಚ್ಚಿ ಬೆವತು ಕತ್ತೆತ್ತಿದಾಗ ನಾಗರಾಜನ ಮುಖ ಕಾಣಿಸಿಕೊಂಡಿತು.

"ಮನೆಯ ಮೂಲೆಯಲ್ಲಿ ನಮಗೂ ಕಾರ್‌ಗಳಿಗೂ ಮಧ್ಯೆ ವಸಂತ ಸಿಗರೇಟ್ ಸೇದುತ್ತಾ ನಿಂತಿದ್ದಾನೆ. 'ನಾಗರಾಜ ಪಿಸುಗುಟ್ಟಿದ.

"ಥುತ್! ಮೊದಲಂಕದಲ್ಲಿ ಅರ್ಧ ಗಂಟೆ ಮಾತ್ರ ಅವನ ಪಾತ್ರ ಇದ್ದದ್ದು. ಅವನನ್ನೇ ನೋಡುತ್ತಿರು. ಅವನು ನಮ್ಮೆಡೆ ಬಂದರೆ ಸೀನು. ನೀನು ಬೇಕಾದರೆ ನಾನು ಸೀನುತ್ತೇನೆ.

ಭೀಮರಾಯ ಪೊದೆಯೆಡೆಗೆ ಹೆಜ್ಜೆ ಹಾಕಿದ. ಹೆಚ್ಚು ಕತ್ತಲಾಗಿರಲಿಲ್ಲವಾದರೂ ನಿಧಾನಿಸುವ ಮನಸ್ಸಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲಿ ಈ ಅಂಕ ಮುಗಿದು ಮುಂದಿನ ಅಂಕಕ್ಕಾಗಿ ಬಟ್ಟೆ ಹಾಕಿಕೊಳ್ಳಲು ಸುಲೋಚನೆ ಕೋಣೆಗೆ ಹೋದಾಗ ಪದಕ ಕಣ್ಮರೆಯಾದ್ದು ಪತ್ತೆಯಾಗಿ ಬಿಡುವುದು. ಪೊದೆಯ ಬುಡಕ್ಕೆ ಕೈಹಾಕಿ ಒಂದೇ ಬಾರಿಗೆ ಕಟ್ಟನ್ನೆತ್ತಿದ. ಕತ್ತೆತ್ತಿದರೆ ಎದುರಿಗೆ ಸುಲೋಚನೆಯ ಅಡಿಗೆಯವನು ಕೈ ನೀಡಿ ನಿಂತಿದ್ದಾನೆ.

"ಆ ಕಟ್ಟು ನನ್ನ ಕೈಗೆ ಕೊಡುವಿರಾ?" ಗಂಭೀರವಾಗಿ ಹೇಳಿದ.

"ಏನಯ್ಯ ನಿನ್ನ ಅಪಲಾಪ?"

“ನಾನು ಪತ್ತೇದಾರಿ ಶಾಖೆಯ ಇನ್ಸ್‌ಪೆಕ್ಟರ್ ನನ್ನ ಜೊತೆ ನೀವು ಬನ್ನಿ, ಸುಲೋಚನಾದೇವಿ ನಿಮ್ಮ ಎದುರಿನಲ್ಲಿ ಆ ಕಟ್ಟು ಬಿಚ್ಚು ತ್ತಾಳೆ”.

ಭೀಮರಾವ್ ದೀರ್ಘವಾಗಿ ಸಿಟ್ಟುಸಿರೆಳೆದ.

“ಸುಲೋಚನೆಗೂ ಇದಕ್ಕೂ ಸಂಬಂಧವಿಲ್ಲ.” ನಾಗರಾಜ ನಿಧಾನವಾಗಿ ಅಡಿಗೆಯವನ ಮೇಲೇ ಎಗರಲು ಹೆಜ್ಜೆ ಹೂಡುತ್ತಿದ್ದ ಸನ್ನಾಹವನ್ನು ನೀರೀಕ್ಷಿಸುತ್ತ ಹೇಳಿದ. ಭೀಮರಾಯನ ಕಣ್ಣು ಅರ್ಧ ಬೇರೆಡೆ ತಿರುಗಿದ್ದನ್ನು ಕಂಡ ಪತ್ತೇದಾರ· ಅವನನ್ನು ಹಿಡಿಯಲು ಮುಂ ದಕ್ಕೆ ನೊಗೆದ. ಆದರೆ ಬಿತ್ತವನ ಹೊಟ್ಟೆಗೆ ಬಾರಿ ಪೆಟ್ಟು. ಏನೆಂದು ತಿಳಿ ಯುವುದರೊಳಗೆ ಕತ್ತು ಅದುಮಿ ಹಿಡಿದಿದ್ದರು. ಹಿಂದಿನಿಂದ ಬೆನ್ನಿಗೆ ಮೊಣಕಾಲು ಹೊಡೆತ, ತಾಳಲಾರದೆ ನೆಲಕ್ಕುರುಳಿದ.

‘ ಅಯ್ಯೋ ದೇವರೆ! ಕೊಂದೇ ಬಿಟ್ಟೆಯಲ್ಲೊ ನಾಗ!”

“ಸತ್ತರೆ ಸತ್ತ ನಡಿ ಬೇಗ.”

ಮುಸುಗುತ್ತಿದ್ದ ಕತ್ತಲೆಯಲ್ಲಿ ಇಬ್ಬರೂ ಕಾರ ಕಡೆ ಹೆಜ್ಜೆ ಹಾಕಿ ದರು. ಪದಕ ಭೀಮರಾಯನ ಒಳ ಜೇಬಿನಲ್ಲಿ ಭದ್ರವಾಗಿ ಕುಳಿತಿತ್ತು. ಕಾರನ್ನು ಸಮೀಪಿಸಿದೊಡನೆ ಭೀಮರಾಯ ನೆಗೆದು ಕುಳಿತು ಸ್ಟಾರ್ಟ ರನ್ನು ಒತ್ತಿದ. ಉದ್ಭವಿಸಿದಂತೆ ಪೋಲೀಸ್ ಪಡೆಕಾರನ್ನು ಸುತ್ತು ವರಿಯಿತು. ಪೋಲೀಸ್ ಪಡೆ ನಾಯಕ “ಸಾಕು ಮಾಡಪ್ಪ ಸಾಹಸ ವನ್ನು” ಅಂದ.

ಮೂರು ತಿಂಗಳು ಕಳೆದಿತ್ತು. ದೂರ ಪ್ರವಾಸ ಮುಗಿಸಿಕೊಂಡು ಬೊಂಬಾಯಿಗೆ ಹಿಂತಿರುಗಿದ ನಾಡಿಗ ತನ್ನ ಅಂಗಡಿಯೊಳಕ್ಕೆ ಕಾಲಿಟ್ಟು ತನ್ನ ಪಾಲುದಾರನೆದುರು ಹೋಗಿ ಕುಳಿತ. ಅವನ ಜೊತೆಯಲ್ಲಿ ಸುಂದ ರಾಂಗಿಯೊಬ್ಬಳು ಬಂದು ಕುಳಿತಳು.

“ರಾಮೂ ಬೆಚ್ಚಬೇಡ—ಈಕೆ ನನ್ನ ಹೆಂಡತಿ, ಹೆಸರು ‘ಚಂದ್ರ ವದನಾ’ ಹೆಂಡತಿಕಡೆ ತಿರುಗಿ “ಇವನು ರಾಮು ನನ್ನ ಪಾಲುದಾರ”.

ರಾಮು, ನಾಡಿಗ ಸ್ವಲ್ಪ ಹೊತ್ತು ವ್ಯಾಪಾರದ ಕುರಿತು ಮಾತ ನಾಡಿದರು· ನಂತರ ನಾಡಿಗ ಕೈ ಪೆಟ್ಟಿಗೆಯನ್ನೂ ತೆಗೆದ ಕಟ್ಟೊಂ

ದನ್ನು ತನ್ನ ಪಾಲುದಾರನ ಮುಂದಿಡುತ್ತ "ಇದರೊಳಗಿರುವ ವಸ್ತುಗಳು ನಿನಗೆ ಹಿಡಿಸಿಯಾವು" ಅಂದ ರಾಮು ಅವುಗಳೆಡೆ ಬೆಟ್ಟಿಸಿದ.

"ಏನು? ಸುವಿಖ್ಯಾತ ಕಲಾವಿದರ ಮೂಲ ಚಿತ್ರಗಳು ಅಬ್ಬಾ! ಎಲ್ಲಿತ್ತು?"

"ಎಲ್ಲಿತ್ತು? ಸುಲೋಚನೆಯ ಕಲಾಭಂಡಾರಕ್ಕೆ ಕನ್ನಗತ್ತರಿ ಬಿದ್ದುದರಿಂದ ಸಿಕ್ಕವು ಎಂದುತ್ತರಿಸಿದ ನಾಡಿಗ, ಮುಂದುವರಿದು ನುಡಿದ ಚಂದ್ರವದನೆಯೇ ಸುಲೋಚನೆಯ ಪರಿಚಯ ಮಾಡಿಕೊಟ್ಟವಳು; ಅವಳು ನಡೆಸುತ್ತಿದ್ದ ನಾಟಕದಲ್ಲಿ ಪಾತ್ರವಹಿಸುವಂತೆ ಮಾಡಿದವಳು; ಈ ಚಿತ್ರಗಳ ಕಡೆ ಕಣ್ಣು ಹರಿಸಿದವಳು. ಕಂಡೊಡನೆ ಕದಿಯಬಹುದಿತ್ತು; ಆದರೆ ಸಿಕ್ಕಿ ಬೀಳದ ಹಾಗೆ ಕದಿಯಬೇಕಲ್ಲವೇ? ನಮ್ಮ ಅದೃಷ್ಟ ಚೆನ್ನಾಗಿತ್ತು. ಇಬ್ಬರು ಕಳ್ಳರು ಸುಲೋಚನೆಯ ಪದಕದ ಮೇಲೆ ಕಣ್ಣಿಟ್ಟು ಗಂಟುಬಿದ್ದರು. ನಮಗೆ ಮೊದಲೇ ಇದು ಗೊತ್ತಾಗಿ ಹೋಯಿತು. ಮೊದ ಮೊದಲು ಅವರಿಗೆ ಎಲ್ಲಾ ಅನುಕೂಲವಾಗಿರುವಂತೆ ತಕ್ಕ ಏರ್ಪಾಡು ಮಾಡಿದೆವು. ನಂತರ ಅವರ ವಿಷಯದಲ್ಲಿ ಇತರರು ಸಂಶಯ ಪಡುವಂತೆ ವಿಷಬೀಜ ಬಿತ್ತಿದೆವು. ಈ ಮಧ್ಯೆ ಎಲ್ಲಾ ಮಾತಿಗೂ ಬಾಯಿ ಹಾಕುವ ಒಬ್ಬ ವ್ಯಕ್ತಿ ಸಿಕ್ಕ. ಅವನಿಂದ ಬಹಳ ಅನುಕೂಲವಾಯ್ತು. ಆ ಇಬ್ಬರು ಕಳ್ಳರ ಪೈಕಿ ಒಬ್ಬ ಸತ್ತವನೊಬ್ಬನ ಹೆಸರಿಟ್ಟುಕೊಂಡು ಬಂದಿದ್ದಾನೆಂಬುದನ್ನು ಆತನೇ ಪತ್ತೆಮಾಡಿ ಕೊಟ್ಟ. ಇದರ ಮಧ್ಯೆ ಚಂದ್ರವದನ ಯಾರೋ ಒಬ್ಬ ಹಸುವಿನಂತಹ ಮನುಷ್ಯನನ್ನು ತೋರಿಸಿ ಆತ ಪತ್ತೇದಾರ ಎಂದು ಆ ಕಳ್ಳರನ್ನೂ ಬೆದರಿಸಿ, ಅವರು ಆತನ ಮೇಲೆ ಕಣ್ಣಿಟ್ಟು, ನಿಜವಾದ ಪತ್ತೇದಾರನಿಗೆ ಕೆಲಸ ಸುಲಭವಾಗುವಂತೆ ಮಾಡಿದ್ದಳು. ಜನ ಚೆಲ್ಲಾಪಿಲ್ಲಿಯಾದರು ಪತ್ತೇದಾರನಿಗೆ ಪೆಟ್ಟುಬಿತ್ತು. ಕಳ್ಳರು ಸಿಕ್ಕಿಬಿದ್ದರು ನಾವು ಈ ಚಿತ್ರಗಳನ್ನೂ ಬಗಲಿಗೇರಿಸಿ ಗಂಭೀರವಾಗಿ ಸಾಗಿ ಬಂದೆವು. ಸುಲೋಚನೆಗೆ ದಿಗ್ಭ್ರಮೆಯಾಯಿತು. ನಾಟಕವನ್ನೂ ನಿಲ್ಲಿಸಿ ಊರು ಬಿಟ್ಟು ಹಳ್ಳಿಗೆ ಹೋದಳು. ಸಿಡಿಲಿನಾಘಾತವನ್ನು ಸುಧಾರಿಸಿಕೊಳ್ಳಲೆಂದು ಚಿತ್ರಗಳ ಕಳವು ಅವಳಿಗೆ ಗೊತ್ತಾದ್ದು ಹಳ್ಳಿಯಿಂದ ಮೂರು ತಿಂಗಳ ನಂತರ ಹಿಂತಿರುಗಿದ

ಮೇಲೇ! ಅವುಗಳ ಕಳ್ಳತನವೂ ಭೀಮರಾಯ—ನಾಗರಾಜರ ತಲೆಯ ಮೇಲೆ ಉರುಳಿದೆ. ಸಂಶಯಕ್ಕೊಳಗಾಗದ ನಮ್ಮ ಕೈಗೆ ಮಾಲು ಬಂದಿದೆ!"

০O০

ವಾಚಾಳಿ ಸುಂದರಯ್ಯ ಸುಮ್ಮನಿರದೆ ಕಳುವಾದ ಚಿತ್ರಗಳ ಬೆಲೆ ಕುರಿತು ಅಲ್ಲಲ್ಲಿ ಮಾತನಾಡತೊಡಗಿದ. ತನ್ನ ಸ್ನೇಹವಲಯಕ್ಕೆ ಸೇರಿದ ಪತ್ತೇದಾರಿ ಶಾಖೆಗಳಲ್ಲೂ ಈ ಅಂಶಗಳನ್ನು ಪ್ರಸ್ತಾಪಮಾಡಿದ. ಪೋಲೀಸರ ಶೋಧನೆಯಂತ್ರ ಕೆಲಸ ಮಾಡಲಾರಂಭಿಸಿತು.

[ಇಂಗ್ಲಿಷ್ ಕಥೆಯೊಂದರಾಧಾರದಿಂದ]

Printed & Published by K. H. Shetty at the Navayuga press Udipi.